ANANTHKUMAR PRATISHTHANA

# ಅನಂತಪಥ



ಆದರ್ಶ ರಾಜಕಾರಣಿಯ ಪ್ರತಿರೂಪ

ನಾನು ಕಂಡ ಅನಂತಕುಮಾರ್ ಮಾಲಿಕೆಯಲ್ಲಿ ಪುಟ-3

ಡಿ.ವಿ. ಸದಾನಂದ ಗೌಡ

ಸಂಪುಟ-1 ಮಾರ್ಚ್ - 2021 ಸಂಚಿಕೆ - 9

# ಭಾರತದಲ್ಲಿ ಆರೋಗ್ಯ ಕ್ರಾಂತಿ – ಜನೌಷಧಿ ಯೋಜನೆ




“ಭಾರತದೇಶದ ಬಹುಭಾಗಗಳಲ್ಲಿ ಮೆಡಿಸಿನ್ ಮಾಫಿಯಾ ಪ್ರಬಲವಾಗಿಬಿಟ್ಟಿರುವುದು ದುರದೃಷ್ಟಕರ. ತೀರಾ ಕಡಿಮೆ ಬೆಲೆಯ ಔಷಧಗಳಿಗೂ ದುಬಾರಿ ದರಗಳನ್ನು ವಿಧಿಸುತ್ತಿರುವ ಭಾರತೀಯ ಮತ್ತು ಬಹುರಾಷ್ಟ್ರೀಯ ಕಂಪೆನಿಗಳ ಹಿಡಿತದಿಂದ ನಮ್ಮ ದೇಶವನ್ನು ಮುಕ್ತಗೊಳಿಸುವುದು ನಮ್ಮ ಧ್ಯೇಯ. ಮೆಡಿಸಿನ್ ಮಾಫಿಯಾದ ಪ್ರಾಬಲ್ಯವನ್ನು ತಗ್ಗಿಸುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ.”

**-ಅನಂತಕುಮಾರ್, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರು, (ಫೆಬ್ರವರಿ ೨೦, ೨೦೧೭)**

ಅನಂತಕುಮಾರರು ದೃಢನಿಶ್ಚಯಪೂರ್ವಕ ಈ ಘೋಷಣೆಮಾಡಿದ ನಾಲ್ಕು ವರ್ಷಗಳ ತರುವಾಯ ದಿನಾಂಕ 07/03/2021 ರಂದು ದೇಶದ ಪೂರ್ವೋತ್ತರ ಮೂಲೆಯ ಶಿಲ್ಲಾಂಗಿನಲ್ಲಿ 7500 ನೆಯ ಜನೌಷಧಿ ಕೇಂದ್ರದ ಉದ್ಘಾಟನೆಯ ಸಂದರ್ಭದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು ಹೇಳಿದ ಮಾತುಗಳಿವು : “ಈ ಜನೌಷಧಿ ಕೇಂದ್ರಗಳು ಬಡವರಿಗೆ ಮತ್ತು ಮಧ್ಯಮವರ್ಗದ ಕುಟುಂಬಗಳಿಗೆ ಪ್ರತೀ ವರ್ಷ 3,600 ಕೋಟಿ ರೂಪಾಯಿಗಳನ್ನು ಉಳಿತಾಯ ಮಾಡುತ್ತಿವೆ”

ಒಂದು ಕಾಲದಲ್ಲಿ ಅಂದಿನ ಆಳುವ ವರ್ಗದ ಜನರ ಉಪೇಕ್ಷೆಗೊಳಗಾಗಿ ಬಹುತೇಕ ಕಣ್ಣು ಮುಚ್ಚಿದ್ದ ಒಂದು ಯೋಜನೆ ಹೊಸ ಆಡಳಿತದ ಅಡಿಯಲ್ಲಿ ಸೂಕ್ತ ಪೋಷಣೆ ದೊರೆತು ವಿಶಾಲ ಹೆಮ್ಮರವಾಗಿ ಬೆಳೆದ ಯಶೋಗಾಥೆಯಿದು. ಜನೌಷಧಿ ಯೋಜನೆಯ ಪುನರುಜ್ಜೀವನಕ್ಕೆ ಪ್ರಮುಖ ಕಾರಣಕರ್ತರಾದ ಶ್ರೀ ಅನಂತಕುಮಾರ್ ತಮ್ಮ ಯೋಜನೆ ಸಫಲವಾದುದನ್ನು ನೋಡಲು, ಮೋದಿಯವರ ಮೆಚ್ಚುಗೆಯ ಮಾತುಗಳನ್ನು ಕೇಳಲು ಇಲ್ಲವಾಗಿರುವುದೊಂದೇ ಕೊರತೆ.

### ಮುಗ್ಗರಿಸಿದ್ದ ಯೋಜನೆ

ಭಾರತದ ಸಾರ್ವಜನಿಕ ವಲಯದ ಔಷಧ ತಯಾರಿಕೆ ಕಂಪೆನಿಗಳ ಬ್ಯೂರೋ (B P P I ) ಸಂಸ್ಥೆಯ ಅಂತರ್ಜಾಲ ತಾಣವನ್ನು ಎಡತಾಕಿದರೆ ಜನೌಷಧಿ ಯೋಜನೆಯು 2008 ನೆಯ ಇಸವಿಯಲ್ಲಿ ಪ್ರಾರಂಭವಾಗಿ ಮೊತ್ತ ಮೊದಲ ಮಳಿಗೆಯು 25/11/2008 ರಂದು ಪಂಜಾಬಿನ ಅಮೃತಸರದಲ್ಲಿ ಪ್ರಾರಂಭವಾಯಿತು ಎಂಬ ದಾಖಲೆ ದೊರೆಯುತ್ತದೆ. ಜೊತೆಗೆ ಯೋಜನೆಯು ಮೊದಲ ನಾಲ್ಕು ವರ್ಷಗಳಲ್ಲಿಯೇ ಹೇಗೆ ಮುಗ್ಗರಿಸಿತು ಎಂಬ ವಿವರಗಳೂ ದೊರೆಯುತ್ತವೆ.

ಸರಕಾರದ ಬೊಕ್ಕಸದಿಂದ ನೂರಾರು ಕೋಟಿ ರೂಪಾಯಿ ಹರಿದರೂ ಮಾರ್ಚ್2012ರ ಹೊತ್ತಿಗೆ ಅದುವರೆಗೆ ಸ್ಥಾಪಿತವಾದ 149 ಜನೌಷಧಿ ಕೇಂದ್ರಗಳಲ್ಲಿ ಅರ್ಧಕ್ಕೂ ಹೆಚ್ಚು ಕೇಂದ್ರಗಳು ಕಣ್ಣು ಮುಚ್ಚಿದವು. 2012 ರಿಂದ 2014ರ ವರೆಗೆ 149.82 ಕೋಟಿ ರೂಪಾಯಿ ವ್ಯಯಿಸಿದರೂ ಕೇವಲ 99 ಪುಟ 7 ರಲ್ಲಿ ಮುಂದುವರೆದಿದೆ

# ಅನಂತಪಥ ಸಾಮಾಜಿಕ ಪರಿವರ್ತನೆಗೆ ದಿಕ್ಸೂಚಿಯಾಗಲಿ

## ಶ್ರೀ ಡಿ. ವಿ. ಸದಾನಂದ ಗೌಡರ ಆಶಯ




ಅನಂತಪಥ ಮಾಸಪತ್ರಿಕೆಯ ಎಂಟನೆಯ ಸಂಚಿಕೆಯನ್ನು ಕಳೆದ ಫೆಬ್ರವರಿ ೨೨ರಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆಯ ಸಚಿವರಾದ ಶ್ರೀ ಡಿ.ವಿ. ಸದಾನಂದ ಗೌಡರು ಬಿಡುಗಡೆ ಮಾಡಿದುದು ವಿಶೇಷ. ದೆಹಲಿಯ ತಮ್ಮ ಕಚೇರಿಯಿಂದ ಆನ್ ಲೈನ್ ಮೂಲಕ ಪತ್ರಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದ ಸಚಿವರು, "ಅನಂತಪಥ ಪತ್ರಿಕೆಯನ್ನು ಬಿಡುಗಡೆ ಮಾಡುವುದು ನನಗೆ ಬಹಳ ಸಂತೋಷ ನೀಡುತ್ತಿದೆ. ಶ್ರೀ ಅನಂತಕುಮಾರ್ ಅವರು ಕುಳಿತ ಕುರ್ಚಿಯಲ್ಲೇ ಕುಳಿತು ಇಂದು ನಾನು ಇದನ್ನು ಬಿಡುಗಡೆ ಮಾಡುತ್ತಿದ್ದೇನೆ; ಇದಕ್ಕಿಂತ ದೊಡ್ಡ ಅವಕಾಶ ಬೇಕೆ?" ಎಂದ ಶ್ರೀ ಸದಾನಂದ ಗೌಡರು ಅನಂತಕುಮಾರರ ವ್ಯಕ್ತಿತ್ವ, ಸಾಧನೆಗಳನ್ನು ಸ್ಮರಿಸಿಕೊಂಡರು.

ಮುಂದಿನ ದಿನಗಳಲ್ಲಿ ಅನಂತಪಥವನ್ನು ಇಂಗ್ಲಿಷ್ ಭಾಷೆಯಲ್ಲೂ ಹೊರತರಬೇಕೆಂಬ ಪ್ರತಿಷ್ಠಾನದ ಉದ್ದೇಶ ಸಮರ್ಪಕವಾಗಿದೆ. ದೇಶದ ಮೂಲೆ ಮೂಲೆಗೂ ಅನಂತಕುಮಾರ್ ಅವರ ವಿಚಾರಧಾರೆಯನ್ನು ತಲುಪಿಸುವುದು ಬಹಳ ಅವಶ್ಯಕ. ಏಕೆಂದರೆ, ಶ್ರೀ ಅನಂತಕುಮಾರ್ ಅವರು ಭಾರತದ ರಾಜಕೀಯ ರಂಗದಲ್ಲಿ ಕಂಡುಬಂದ ಒಬ್ಬ ಅಪರೂಪದ ನಾಯಕರು. ಇಂದು ಯಾರನ್ನಾದರೂ ಅವರೊಡನೆ ಹೋಲಿಸಿ ನೋಡಬೇಕೆಂದರೆ, ಯಾರೂ ಸಿಗುವುದೇ ಇಲ್ಲ. ಅನಂತಕುಮಾರರಿಗೆ ಅನಂತಕುಮಾರರೇ ಸಾಟಿ. ಆದ್ದರಿಂದ ಅವರ ವಿಚಾರಗಳನ್ನು ಎಲ್ಲರಿಗೂ ತಿಳಿಸುವುದು ಬಹಳ ಮುಖ್ಯ. ಹಾಗಾಗಿ ಅನಂತಪಥ ಇಂಗ್ಲಿಷ್ ಭಾಷೆಯಲ್ಲೂ ಬರಲಿ ಎಂದು ಅವರು ಹಾರೈಸಿದರು.

ಶ್ರೀ ಅನಂತ್ ಜೀ ಅವರ ಕನಸನ್ನು ನನಸಾಗಿಸಲು ಅನಂತ ಪ್ರತಿಷ್ಠಾನ ಇವತ್ತು ಪ್ರಯತ್ನಿಸುತ್ತಿದೆ. ಅದರ ಮುಖಾಂತರ ಅವರ ಚಿಂತನೆಗಳು, ಸಂದೇಶಗಳು ಜನರಿಗೆ ತಲುಪುವಂತಹ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೀರಿ. ಇದನ್ನು ಅನಂತಪಥ ಪತ್ರಿಕೆಯ ಮೂಲಕ ಎಲ್ಲರಿಗೂ ತಲುಪಿಸುವಂತಹ ಕಾರ್ಯವನ್ನು ಕೂಡ ಮಾಡುತ್ತಿದ್ದೀರಿ. ಇದು ನಮ್ಮ ಸಾಮಾಜಿಕ ಪರಿವರ್ತನೆಗೆ ಒಂದು ದಿಕ್ಕು ತೋರಿಸುವಂತಹ ಅತ್ಯಂತ ಒಳ್ಳೆಯ ಕಾರ್ಯವಾಗಿದೆ. ಹಿಂದಿನ ಸಂಚಿಕೆಗಳೂ ನನ್ನಲ್ಲಿವೆ. ಅದರಲ್ಲಿ ಮೂಡಿ ಬಂದಿರುವ ಎಲ್ಲ ವಿಚಾರಗಳೂ ನನ್ನ ಗಮನದಲ್ಲಿವೆ. ಅವುಗಳನ್ನು ಕೂಲಂಕಷವಾಗಿ ಓದಿದ್ದೇನೆ ಎಂದು ಹೇಳಿ ಪ್ರತಿಷ್ಠಾನವನ್ನು ಅಭಿನಂದಿಸಿದರು.



ಕೃತಕ ಬುದ್ಧಿಮತ್ತೆಯ ಪ್ರಭಾವ-ಪ್ರಯೋಜನ

ಶ್ರೀಮತಿ ವಿಜಯ ದೀಪ್ತಿ ಪುಟ - 5

ಅನಂತ ಯಶಸ್ಸಿನ ಆಪ್ತ ಯೋಜನೆ

ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಪುಟ - 8



ನಾಯಕತ್ವಕ್ಕೆ ಇಂಬುಕೊಟ್ಟ ಗೆಳೆಯರ ಒತ್ತಾಸೆ

ಅಚ್ಯುತ ಲಿಮಯೆ ಪುಟ - 9





ಸಂಘಟನೆ-ಸಮಾಜ-ರಾಷ್ಟ್ರ ಸೇವೆ

ಡಾ. ವಿಷ್ಣುಕಾಂತ್ ಚಟಪಲ್ಲಿ ಪುಟ - 4

# ಆದರ್ಶ ರಾಜಕಾರಣಿಯ ಪ್ರತಿರೂಪ

ಡಿ.ವಿ. ಸದಾನಂದ ಗೌಡ
ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರು

ನಾನು ಕಂಡಂತೆ



ಅನಂತಕುಮಾರ್

ಶ್ರೀ ಅನಂತಕುಮಾರ್ ಅವರು ಇಂದು ನಮ್ಮೊಂದಿಗಿಲ್ಲ ಎಂಬುದನ್ನು ನಂಬುವುದೇ ಕಷ್ಟ. ಯಾರು ಸಾಮಾಜಿಕ ಪರಿವರ್ತನೆಗೆ ತಮ್ಮ ಸರ್ವಸ್ವವನ್ನೂ ಮುಡಿಪಾಗಿಟ್ಟಿದ್ದರೋ, ಇನ್ನಷ್ಟು ಕಾಲ ನಮ್ಮೊಡನಿದ್ದು ನಮಗೆಲ್ಲರಿಗೂ ಮಾರ್ಗದರ್ಶನ ಮಾಡಬೇಕಿತ್ತೋ ಅವರು ಇಂದು ನಮ್ಮೊಂದಿಗಿಲ್ಲ ಎಂದರೂ ಅವರು ಹಾಕಿ ಕೊಟ್ಟ ದಾರಿಯಲ್ಲೇ ಮುಂದುವರಿದು ಅವರ ಸಂಕಲ್ಪಗಳನ್ನು ಪೂರ್ಣಗೊಳಿಸುವ ಜವಾಬ್ದಾರಿಯನ್ನು ನೀವೆಲ್ಲರೂ ವಹಿಸಿಕೊಂಡಿದ್ದೀರಿ. ಇದು ನಿಜವಾಗಿಯೂ ಶ್ಲಾಘನೀಯ ಸಂಗತಿ. ಪರಿವರ್ತನೆ ಜಗದ ನಿಯಮ. ಆದರೆ ಪರಿವರ್ತನೆಗೆ ವೇಗ ಕೊಡುವಂಥ ವ್ಯಕ್ತಿಗಳ ವೇಗಕ್ಕೆ ಯಾವುದೇ ಅಡೆತಡೆಗಳಿರಬಾರದು. ಶ್ರೀ ಅನಂತಕುಮಾರ್ ಅವರು ಇರಲಿ, ಇಲ್ಲದೇ ಇರಲಿ ಆ ಕೆಲಸ ಕಾರ್ಯಗಳು ಮುಂದುವರಿಯಬೇಕು. ಅದನ್ನು ಅನಂತಕುಮಾರ್ ಪ್ರತಿಷ್ಠಾನವು ನಿರ್ವಹಿಸುತ್ತಿರುವುದು ಸಂತೋಷದ ವಿಷಯ.

ನಾನು ಕೂಡ ಇಂದು ಈ ಸ್ಥಾನಕ್ಕೇರಬೇಕೆಂದರೆ, ಅದಕ್ಕೆ ಅನಂತಕುಮಾರರೂ ಕಾರಣ. ಅವರು ಹಲವು ಪ್ರಥಮಗಳ ಸರದಾರ. ಅವರು ಬಹಳ ಕಲ್ಪನಾಶೀಲರಾಗಿದ್ದವರು. ನಮ್ಮ ಪ್ರಧಾನ ಮಂತ್ರಿಗಳು ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗಕ್ಕೆ ಹೆಚ್ಚು ಒತ್ತು ಕೊಡಬೇಕು ಎಂದು ಹೇಳಿದ್ದಾರೆ. ಈ ವಿಭಾಗವನ್ನು ಹುಟ್ಟುಹಾಕಿದವರು ಶ್ರೀ ಅನಂತಕುಮಾರ್ ಅವರೇ. ತಮ್ಮ ೩೭ನೇ ವಯಸ್ಸಿನಲ್ಲಿಯೇ ಕೇಂದ್ರದಲ್ಲಿ ಸಚಿವರಾದ ಅವರು ಒಬ್ಬ ಅಪ್ಪಟ ಸ್ನೇಹಜೀವಿ. ಅವರು ನಿಧನರಾದ ಸಂದರ್ಭದಲ್ಲಿ ನಾವು ನೋಡಿದ ಹಾಗೆ, ಜನ ಪಕ್ಷ ಭೇದ, ಮೇಲು, ಕೀಳು ಎಲ್ಲವನ್ನು ಮರೆತು ಅಂತಿಮ ದರ್ಶನಕ್ಕಾಗಿ ಬಂದಿದ್ದರು. ಹೀಗೆ ಬಂದಂತಹ ಜನ ಸಮೂಹವು ಅವರ ಜನಪ್ರಿಯತೆಗೆ ಬೇರೆಯವರ ವೈಯಕ್ತಿಕ ಪ್ರಮಾಣಪತ್ರದ ಅವಶ್ಯಕತೆ ಪ್ರಾಯಶಃ ಇಲ್ಲ ಎಂಬುದನ್ನು ತೋರಿಸುತ್ತದೆ.

ನನಗೆ ಹಿರಿಯರು ಹೇಳಿದ ಒಂದು ಮಾತು ಸದಾ ನೆನಪಿಗೆ ಬರುತ್ತದೆ. ಒಬ್ಬ ವ್ಯಕ್ತಿ ಸ್ವಲ್ಪ ಬೆಳೆದ ಹಾಗೆ, ಎಲ್ಲರೂ ಅವನಿಗೆ ಗೌರವ ತೋರಿಸಬೇಕು, ನಮಸ್ಕಾರ ಹಾಕಬೇಕು ಎಂದು ಭಾವಿಸತೊಡಗುತ್ತಾನೆ. ನೀವು ಎಷ್ಟೇ ಎತ್ತರಕ್ಕೆ ಏರಿದರೂ, ಹಾಗೆ ಎತ್ತರಕ್ಕೆ ಏರುವುದು ಯಾಕೆ, ಹೇಗೆ, ಹಾಗೆ ಏರುವವರು ಯಾರು ಎಂಬುದನ್ನು ಅರ್ಥ ಮಾಡಿಕೊಳ್ಳುವುದಿಲ್ಲ. ಉದಾಹರಣೆಗೆ ನೀವು ಯಾವುದಾದರೂ ಒಂದು ಬೆಟ್ಟದ ಬುಡಕ್ಕೆ ಹೋಗಿ, "ಬೆಟ್ಟವೇ ತಲೆಬಾಗು" ಎಂದು ಹೇಳಿದರೆ, ಅದು ತಲೆಬಾಗುತ್ತದೆಯೇ? ಇಲ್ಲ. ಅದು ತನ್ನ ಅಸ್ತಿತ್ವವನ್ನು ಅದೇ ರೀತಿ ಉಳಿಸಿಕೊಳ್ಳುತ್ತದೆ. ಆದರೆ ನೀವು ಶ್ರಮ ಪಟ್ಟು ಆ ಬೆಟ್ಟವನ್ನು ಏರಿದರೆ, ಆ ಬೆಟ್ಟ ನಿಮ್ಮ ಕಾಲ ಬುಡದಲ್ಲಿರುತ್ತದೆ.

ಶ್ರೀ ಅನಂತಕುಮಾರ್ ಅವರು ಭಾರತದಂತಹ ಒಂದು ಬೆಟ್ಟದ ಮೇಲೇರಿ ಎಲ್ಲವೂ ನನ್ನೊಂದಿಗೇ ಇವೆ ಎಂದು ಹೇಳುವಂತಹ ಸ್ವಾಭಿಮಾನದಿಂದ ಔನ್ನತ್ಯವನ್ನು ತಲುಪಿದವರು. ಅವರು ಬೆಟ್ಟವನ್ನು ಏರಿದ್ದು ಎಲ್ಲರೂ ನನ್ನನ್ನು ನೋಡಲಿ ಎಂದಲ್ಲ, ನಾನು ಇಲ್ಲಿಂದ ಎಲ್ಲರನ್ನೂ ನೋಡಿ, ಜಗತ್ತಿನ ಎಲ್ಲ ವಿಚಾರಗಳನ್ನೂ ಅರಿತು ಅದರ ಮುಖಾಂತರ ನನ್ನ ಮುಂದಿನ ಭವಿಷ್ಯವನ್ನು ದೇಶದ ಸುಧಾರಣೆಗೆ ಹೇಗೆ ತೊಡಗಿಸಿಕೊಳ್ಳಬೇಕೆಂಬುದು ಅವರ ವಿಚಾರವಾಗಿತ್ತು ಎನಿಸುತ್ತದೆ.

ಪ್ರಾಯಶಃ ವಿಶ್ವಸಂಸ್ಥೆಯಲ್ಲಿ ಭಾರತವನ್ನು ಪ್ರತಿನಿಧಿಸಿ, ಕನ್ನಡದಲ್ಲಿ ಮಾತನಾಡಿದ ಅವರ ದಿಟ್ಟ ಹೆಜ್ಜೆ, ಬೇರೆಯವರಿಂದ ಸಾಧ್ಯವಿಲ್ಲ. ವಿಶ್ವಸಂಸ್ಥೆಯಲ್ಲಿ ಅನಂತಕುಮಾರ್ ಮಾತನಾಡಿದ್ದು ಭಾರತ ದೇಶದ ರಾಷ್ಟ್ರಭಾಷೆಯಲ್ಲಿ ಮಾತ್ರವಲ್ಲ, ಅದು ದೇಶದ ಒಂದು ರಾಜ್ಯದಿಂದ ನಾನು ಬಂದಿದ್ದೇನೆ ಎಂಬುದನ್ನು ನೆನೆಯುತ್ತ ಆ ರಾಜ್ಯದ ಆಚಾರ, ವಿಚಾರ, ಸಂಸ್ಕೃತಿಗಳಿಗೆ ಆಧಾರವಾಗಿರುವ ಆ ಭಾಷೆಗೆ ಕೊಟ್ಟ ಗೌರವವಾಗಿತ್ತು.

ಅನಂತಕುಮಾರ್ ಅವರು ಯುವಜನ ಮತ್ತು ಕ್ರೀಡಾ ಇಲಾಖೆಯ ಸಚಿವರಾಗಿದ್ದಾಗ ಹೊಸ ವರ್ಷದ ಸ್ವಾಗತವನ್ನು ವಂದೇ ಮಾತರಂ ಹಾಡುತ್ತಲೇ ಸಾಮೂಹಿಕವಾಗಿ ಆಚರಣೆ ಮಾಡಬೇಕು ಎಂದು ಇಚ್ಛಿಸಿದ್ದರು. ಇಂದಿಗೂ ಅದನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಶ್ರೀಮತಿ ತೇಜಸ್ವಿನಿಯವರಿಗೆ ಅಭಿನಂದನೆಗಳು. ಯುವ ಪೀಳಿಗೆಯಲ್ಲಿ ದೇಶಭಕ್ತಿ ಹೆಚ್ಚಿಸುವಂತಹ ಕೆಲಸಕಾರ್ಯಗಳನ್ನು ತಾವು ಮಾಡುತ್ತಿದ್ದೀರಿ.

ಶ್ರೀ ಅನಂತಕುಮಾರ್ ಎಬಿವಿಪಿ ರಾಜ್ಯ ಕಾರ್ಯದರ್ಶಿಯಾಗಿದ್ದಾಗ, ನಾನು ಒಂದು ಪುಟ್ಟ ಜಿಲ್ಲೆಯ ಪ್ರಧಾನ ಕಾರ್ಯದರ್ಶಿಯಾಗಿದ್ದೆ. ಅವರ ಚಟುವಟಿಕೆಗಳನ್ನು ಅಂದಿನಿಂದ ನಾನು ನೋಡುತ್ತಾ ಬಂದಿದ್ದೇನೆ, ಯುವಕರಿಗೆ ಅವರು ನೀಡುತ್ತಿದ್ದ ತರಬೇತಿಯಲ್ಲಿ ನಾನೂ ಭಾಗಿಯಾಗಿದ್ದೆ. ಅವರು ಎಲ್ಲಿಗೆ ಹೋದರೂ ನನಗೂ ಅವರ



ಹಿಂದೆ ಹೋಗುವ ಅವಕಾಶ ಸಿಕ್ಕಿದ್ದನ್ನು ನೀವೆಲ್ಲರೂ ನೋಡಿಯೇ ಇದ್ದೀರಿ. ಇಂದು ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದೆ ಎಂದರೆ, ೨೦೦೮ರಲ್ಲಿ ಅದಕ್ಕೆ ವೇಗದ ಚಾಲನೆ ಕೊಟ್ಟ ಅನಂತಕುಮಾರರೇ ಕಾರಣ. ಅವರು ಅಧ್ಯಕ್ಷರಾಗುವವರೆಗೆ ನಮ್ಮ ಪಕ್ಷದ ಶಾಸಕರ ಸಂಖ್ಯೆ ೩೦-೪೦ರ ಆಸುಪಾಸಿನಲ್ಲಿಯೇ ಇತ್ತು. ಆದರೆ ಅವರ ಕಾಲದಲ್ಲಿ ಒಮ್ಮೆಗೇ ದುಪ್ಪಟ್ಟು ಸಂಖ್ಯೆಯಷ್ಟು ಶಾಸಕರನ್ನು ವಿಧಾನಸಭೆಗೆ ಕಳುಹಿಸಿಕೊಟ್ಟದ್ದನ್ನು ನಾವು ಮರೆಯುವ ಹಾಗೆಯೇ ಇಲ್ಲ. ಇದಕ್ಕೆ ಕಾರಣ ಅವರು ಹುಟ್ಟುಹಾಕಿದಂಥ ಬೀಜಗಳು. ಅವರು ಹಾಕಿಕೊಟ್ಟ ದಾರಿಯಲ್ಲಿಯೇ ಮುಂದುವರೆದು ನಾವು ನಮ್ಮ ಸ್ವಂತ ಬಲದಿಂದ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದೆವು.

ಅನಂತಕುಮಾರ್ ಅವರು ಪಕ್ಷದ ರಾಜ್ಯಾಧ್ಯಕ್ಷರಾದ ನಂತರ ಮುಂದೆ ನಾನೂ ಅಧ್ಯಕ್ಷನಾದೆ. ಅವರು ಕೇಂದ್ರದಲ್ಲಿ ಸಚಿವರಾದರು. ಹಿಂದೆ ಹಿಂದೆಯೇ ನಾನೂ ಕೇಂದ್ರ ಸಚಿವನಾದೆ. ಆದರೆ ದುರ್ದೈವ, ಇಂದು ಕೇಂದ್ರದಲ್ಲಿ ಅವರಂಥ ಕರ್ನಾಟಕದ ಒಬ್ಬ ಸಮರ್ಥ ನಾಯಕ ಇದ್ದಿದ್ದರೆ, ನಮಗೆಲ್ಲರಿಗೂ ಬಹಳ ಸಹಕಾರಿಯಾಗುತ್ತಿತ್ತು.

ಒಬ್ಬ ವ್ಯಕ್ತಿ ತನ್ನ ಅಸ್ತಿತ್ವವನ್ನು ರೂಪಿಸಿಕೊಂಡು ಸಮಾಜಕ್ಕೆ ಹೇಗೆ ಕೊಡುಗೆ ನೀಡಬಹುದು ಎನ್ನುವುದಕ್ಕೆ ಶ್ರೀ ಅನಂತಕುಮಾರ್ ದೊಡ್ಡ ಉದಾಹರಣೆ. ಅವರಿಗೆ ಕೊಟ್ಟಂಥ ಇಲಾಖೆ ಯಾವುದೇ ಇರಲಿ, ಅವರು ನಿಷ್ಠೆಯಿಂದ ಕೆಲಸ ಮಾಡಿದರು. ನಾಗರಿಕ ವಿಮಾನಯಾನ ಖಾತೆಯ ಮಂತ್ರಿಗಳಾಗಿದ್ದಾಗ ಮಂಗಳೂರಿನಲ್ಲಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣವಾಗುವಂತೆ ನೋಡಿಕೊಂಡರು. ಅವರು ರಸಗೊಬ್ಬರ ಇಲಾಖೆಯನ್ನು ನೋಡಿಕೊಳ್ಳುವ ಮುನ್ನ ರಸಗೊಬ್ಬರವು ರೈತರಿಗೆ ಸಕಾಲದಲ್ಲಿ ತಲುಪುತ್ತಿರಲಿಲ್ಲ. ಕಾಳಸಂತೆ ವ್ಯವಹಾರ ನಡೆಯುತ್ತಿತ್ತು. ಶ್ರೀ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಅವರು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ, ಇಂದಿನವರೆಗೂ ಯಾವ ಕೊರತೆಯೂ ಕಂಡುಬಂದಿಲ್ಲ, ಯಾವ ಗೋಲೀಬಾರ್ ಕೂಡ ನಡೆದಿಲ್ಲ. ಎಲ್ಲ ರಾಜ್ಯಗಳಿಗೂ ಸಮರ್ಪಕವಾಗಿ ರಸಗೊಬ್ಬರವನ್ನು ತಲುಪಿಸುವಂಥ ಒಂದು ವ್ಯವಸ್ಥೆಯನ್ನು ಅವರು ರೂಪಿಸಿದರು. ಬೇವುಲೇಪಿತ ಯೂರಿಯ ಒಂದು ಇತಿಹಾಸವನ್ನೇ ಸೃಷ್ಟಿಸಿತು. ಕಾಳಸಂತೆ ನಿಂತಿತು. ಇಂದು ದೇಶದಲ್ಲಿ ೭೫೦೦, ಕರ್ನಾಟಕದಲ್ಲಿ ೮೫೦ ಜನೌಷಧಿ ಕೇಂದ್ರಗಳಿವೆ ಎಂದರೆ ಅದಕ್ಕೆ ಅವರೇ ಕಾರಣಭೂತರು ಎಂದು ಇಂದು ಈ ಇಲಾಖೆಯ ಮಂತ್ರಿಯಾಗಿ ಹೇಳಲು ನನಗೆ ಬಹಳ ಹೆಮ್ಮೆಯಾಗುತ್ತಿದೆ. ಇಂದು ರಾಸಾಯನಿಕ ಮತ್ತು ರಸಗೊಬ್ಬರ ಮತ್ತು ಫಾರ್ಮಸಿ ಇಲಾಖೆಗಳು ಭಾರತವನ್ನು ಪ್ರಪಂಚದ ಮುಂಚೂಣಿಗೆ ತಂದು ನಿಲ್ಲಿಸಿವೆ. ಕೋವಿಡ್ ಸಮಯದಲ್ಲಿ ಸುಮಾರು ೧೨೦ ದೇಶಗಳಿಗೆ ಭಾರತವು ಔಷಧಿಯನ್ನು ಪೂರೈಕೆ ಮಾಡಿದೆ. ಇದಕ್ಕೆಲ್ಲ ಕಾರಣ ನಮ್ಮ ನಾಯಕರಾಗಿ, ದೇಶದ ನಾಯಕರಾಗಿ, ಜಾಗತಿಕ ನಾಯಕರಾಗಿ ಬೆಳೆದ ಶ್ರೀ ಅನಂತಕುಮಾರ್.

ಇದುವರೆಗೂ ನಾನು ಅವರ ಕಾರ್ಯ ಶೈಲಿಯ ಬಗ್ಗೆ ಹೇಳಿದೆ. ಇನ್ನು ಅವರ ವ್ಯಕ್ತಿತ್ವದ ಬಗ್ಗೆಯೂ ಹೇಳಬೇಕು. ಅವರಿಗಿದ್ದ ಸಮಯಪ್ರಜ್ಞೆಯನ್ನು ಬೇರೆ ಯಾವ ರಾಜಕಾರಣಿಯಲ್ಲೂ ನಾನು ನೋಡಿಲ್ಲ. ಸಮಯಕ್ಕೆ ಸರಿಯಾಗಿ ನಿರ್ಧಾರವನ್ನು ತೆಗೆದುಕೊಂಡು, ಬೇರೆಯವರನ್ನು ಜೊತೆಗೂಡಿಸಿಕೊಂಡು ಅದನ್ನು ಶೀಘ್ರವಾಗಿ ಕಾರ್ಯಗತಗೊಳಿಸುವ ಅವರ ರೀತಿ ಅನುಕರಣೀಯ. ಅವರು ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದಾರೆ. ಅವರ ವಾಕ್ಚಾತುರ್ಯವೂ ಗಮನಾರ್ಹ. ಎಂತಹ ಬಿಗುವಿನ ವಾತಾವರಣವೇ ಇರಲಿ, ಅದನ್ನು ತಮ್ಮ ಮಾತಿನ ಮೂಲಕವೇ ತಿಳಿಗೊಳಿಸುವಂಥ ಹಾಸ್ಯಪ್ರಜ್ಞೆ. ಯಾವುದೋ ಒಂದು ಗಂಭೀರ ಸಮಸ್ಯೆ ಎದುರಾಗಿ ಎಲ್ಲರೂ ಒತ್ತಡದಲ್ಲಿದ್ದರೆ, ಅನಂತಕುಮಾರ್ ಬಂದ ಕೂಡಲೆ ಪರಿಸ್ಥಿತಿಯನ್ನು ತಿಳಿಗೊಳಿಸಿ, ಪರಿಹಾರ ಸೂತ್ರ ಕಂಡುಹಿಡಿದರೆಂದೇ ತಿಳಿಯಿರಿ. ಇದನ್ನು ನಾನು ಅವರ ಹೊಗಳಿಕೆಗಾಗಿ ಹೇಳುತ್ತಿಲ್ಲ, ಇವೆಲ್ಲ ವಾಸ್ತವ ಸಂಗತಿಗಳು. ಸಾರ್ವಜನಿಕ ವಲಯದಲ್ಲಿ ಬಿಜೆಪಿ ಕೇವಲ ಮೇಲುವರ್ಗದವರ ಪಕ್ಷ ಎಂದು ಹೇಳುವುದನ್ನು ಬಿಟ್ಟು ಜನಸಾಮಾನ್ಯರ ಪಕ್ಷ ಎಂದು ಪುಟ 3 ರಲ್ಲಿ ಮುಂದುವರೆದಿದೆ

# ಕಾರ್ಯಕ್ಷಮತೆಯ ಮೇರುವ್ಯಕ್ತಿತ್ವ

**ಶ್ರೀ ತ್ರಿವೇಂದ್ರ ಸಿಂಗ್ ರಾವತ್, ಮಾಜಿ ಮುಖ್ಯಮಂತ್ರಿಗಳು, ಉತ್ತರಾಖಂಡ್**

ಅನಂತಕುಮಾರ್ ಅವರು ಪಕ್ಷದ ರಾಷ್ಟ್ರೀಯಮಹಾಮಂತ್ರಿಯಾಗಿದ್ದ (ಪ್ರಧಾನ ಕಾರ್ಯದರ್ಶಿ) ಸಮಯದಿಂದಲೂ ಅವರೊಂದಿಗೆ ನಮ್ಮಒಡನಾಟವಿದ್ದಿತು. ಅವರು ಪ್ರಧಾನ ಕಾರ್ಯದರ್ಶಿಯಾಗಿದ್ದ ಕಾರಣದಿಂದಾಗಿ ಅನೇಕ ಬಾರಿ ಉತ್ತರಾಖಂಡಕ್ಕೆ ಆಗಮಿಸುತ್ತಿದ್ದರು. ಉತ್ತರಾಖಂಡ್ ರಾಜ್ಯದಲ್ಲಿ ಅಡ್ವಾನಿಯವರ ಜನಾದೇಶ ಯಾತ್ರೆಯನ್ನು ಆಯೋಜಿಸಿದ್ದ ಸಂದರ್ಭದಲ್ಲಿಯೂ ಅವರು ಭಾಗವಹಿಸಿದ್ದರು. ಅವರು ಅತ್ಯಂತ ಆತ್ಮೀಯ ಸ್ವಭಾವದ ವ್ಯಕ್ತಿಯಾಗಿದ್ದರು. ಎಲ್ಲರೊಂದಿಗೂ ಬಹಳ ಆಪ್ತವಾಗಿ ವ್ಯವಹರಿಸುತ್ತಿದ್ದ ಅವರು ಸದಾ ನಗುನಗುತ್ತಾ, ಮುಗುಳ್ನಗುತ್ತಲೇ ಕೆಲಸ ಕಾರ್ಯಗಳನ್ನು ನಿಭಾಯಿಸುತ್ತಿದ್ದರು. ಇದು ಅವರ ಸ್ವಭಾವವೂ ಆಗಿತ್ತು.

ಸಂಘಟನೆಯ ನಿಟ್ಟಿನಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಭಾರತೀಯ ಜನತಾ ಪಾರ್ಟಿ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘದೊಂದಿಗೆ ಅವರಿಗೆ ಹೆಚ್ಚಿನ ಒಡನಾಟವಿತ್ತು. ಅಲ್ಲದೆ, ಆರು ಬಾರಿ ಒಂದೇ ಲೋಕಸಭಾಕ್ಷೇತ್ರದಿಂದ ಸಂಸದರಾಗಿ ಚುನಾಯಿತರಾಗುವುದು ಅತ್ಯಂತ ಮಹತ್ವದ ವಿಷಯವೂ ಹೌದು. ಇದು, ಅವರ ಲೋಕಪ್ರಿಯತೆ ಹಾಗೂ ಸಮಾಜದ ಮೇಲೆ ಅವರು ಬೀರಿದಂತಹ ಪ್ರಭಾವದ ದ್ಯೋತಕವೇ ಸರಿ.

ಅನಂತಕುಮಾರ್ ಅವರು ರಾಸಾಯನಿಕ ಖಾತೆಯ ಮಂತ್ರಿಯಾಗಿದ್ದ ಸಂದರ್ಭ. ಒಂದು ದಿನ ಇದ್ದಕ್ಕಿದ್ದಂತೆ ಅವರಿಂದ ನನಗೆ ದೂರವಾಣಿಯ ಕರೆ ಬಂದಿತು.



ತಮಾಷೆಯಾಗಿಯೇ ಮಾತನಾಡತೊಡಗಿದ ಅವರು, 'ರಾವತ್ ಜೀ, ನೀವು ಉತ್ತರಾಖಂಡದ ಬಗ್ಗೆ ಚಿಂತೆಮಾಡುತ್ತಿಲ್ಲವಾದರೂ, ನಾನು ಆ ಬಗ್ಗೆ ಚಿಂತಿಸುತ್ತಿದ್ದೇನೆ. ಅಲ್ಲಿ CIPET(Centre for Skilling and Technical Support (CSTS) ಅನ್ನು ಪ್ರಾರಂಭಿಸಬೇಕಿದೆ. ಆದಷ್ಟು ತ್ವರಿತವಾಗಿ ತಾವು ಭೂಮಿಯ ವ್ಯವಸ್ಥೆ ಮಾಡಿ. ಆದಷ್ಟು ಬೇಗನೆ ಅಲ್ಲಿ CIPET ಪ್ರಾರಂಭಗೊಳ್ಳಬೇಕೆಂಬುದು ನನ್ನ ಇಚ್ಛೆ ' ಎಂದರು.

ಅವರಿಗಿದ್ದ ಅನಾರೋಗ್ಯದ ಬಗ್ಗೆ ನನಗೆ ಆಗ ತಿಳಿದಿರಲಿಲ್ಲ. ಅಷ್ಟುಹೊತ್ತಿಗಾಗಲೇ ವೈದ್ಯರು ಅವರ ಗಂಭೀರತಮ ಸಮಸ್ಯೆಯನ್ನು ಪತ್ತೆಹಚ್ಚಿದ್ದರು. ಆದಷ್ಟು ಬೇಗ ಡೆಹರಾಡೂನ್ನಲ್ಲಿ CIPET ಅನ್ನು ಪ್ರಾರಂಭಿಸಬೇಕಿದೆ ಎಂದ ಅವರ ಮಾತಿಗೆ, ನಾನು ಸಹ ಸಹಮತವನ್ನು ವ್ಯಕ್ತಪಡಿಸಿದೆ. ದೇಶದ ೩೨ನೇ CIPET ಅನ್ನು ಅವರು ಉತ್ತರಾಖಂಡಕ್ಕೆ ದೊರಕಿಸಿದರು.

ಐ.ಟಿ.ಪಿ.ಎಲ್ ಬಂದ್ ಆಗಿರುವ ಪ್ರಯುಕ್ತ ಭೂಮಿಯನ್ನು ಉತ್ತರಾಖಂಡಕ್ಕೆ ವಾಪಸ್ಸುಮಾಡತಕ್ಕದ್ದೆಂದು ನಾವು ಸುಮಾರು ೨೬ ವರ್ಷಗಳಿಂದಲೂ



ಒತ್ತಾಯಿಸುತ್ತಿದ್ದೆವು. ಈ ಬಗ್ಗೆ ಮಾನ್ಯ ಅನಂತಕುಮಾರ್ ಅವರನ್ನು ಭೇಟಿಮಾಡಿದಾಗ ಮೊದಲ ಭೇಟಿಯಲ್ಲೇ ಇದಕ್ಕೆ ಸ್ಪಂದಿಸಿದ ಅವರು ಸಂಬಂಧಿತ ಕಾರ್ಯದರ್ಶಿಗಳೆಲ್ಲರನ್ನೂ ಕರೆಸಿ, ಸಮಾಲೋಚಿಸಿದ ನಂತರ ಉತ್ತರಾಖಂಡಕ್ಕೆ ಭೂಮಿಯನ್ನು ವಾಪಸ್ಸು ಮಾಡುವಂತೆ ನಿರ್ದೇಶಿಸಿದರು. ಆಗ ಕಾರ್ಯದರ್ಶಿಗಳು , ಹರಿಯಾಣ ಸರ್ಕಾರವೂ ಸಹ ಭೂಮಿಯನ್ನು ವಾಪಸ್ಸು ಪಡೆದಿದ್ದು, ಕೇಂದ್ರ ಸರ್ಕಾರಕ್ಕೆ ಇದರ ಹಣವನ್ನು ಪಾವತಿಸಿದೆಯೆಂಬ ವಿಷಯವನ್ನು ತಿಳಿಯಪಡಿಸಿದರು. ಐ.ಟಿ.ಪಿ.ಎಲ್ ಬಂದ್ ಆಗಿರುವೆಡೆಗಳಲ್ಲಿ, ರಾಜ್ಯ ಸರ್ಕಾರಕ್ಕೆ ಭೂಮಿಯನ್ನು ವಾಪಸ್ಸುಮಾಡಿದ್ದೇ ಆದಲ್ಲಿ, ಆಯಾ ಸರ್ಕಾರಗಳು ಹಣವನ್ನು ಪಾವತಿಸತಕ್ಕದ್ದೆಂದು ಪಾರ್ಲಿಮೆಂಟಿನಲ್ಲಿ ನಿರ್ಣಯಿಸಲಾಗಿದೆಯೆಂಬ ಮಾಹಿತಿಯನ್ನೂ ಸಹ ಅವರು ಒದಗಿಸಿದರು.

ಆಗ ಅನಂತಕುಮಾರ್ ಅವರು, ಈ ವಿಷಯವನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಬೇಕೆಂತಲೂ, ನಾವು ಉತ್ತರಾಖಂಡಕ್ಕೆ ಯಾವುದೇ ಹಣವನ್ನು ನೀಡಿಲ್ಲವಾದ್ದರಿಂದ ಸದರಿ ಭೂಮಿಯನ್ನು ಶುಲ್ಕರಹಿತವಾಗಿ ಉತ್ತರಾಖಂಡಕ್ಕೆ ನೀಡಬೇಕೆಂಬ ಅಂಶವನ್ನು ಪಾರ್ಲಿಮೆಂಟಿಗೆ ಮನಗಾಣಿಸಲಾಗುತ್ತದೆಂತಲೂ ಭರವಸೆಯಿತ್ತರು.

ಈ ವಿಷಯಕ್ಕೆ ಸಂಬಂಧಿಸಿದಂತೆ ಆಯೋಜಿಸಲಾದ ಸಭೆಯಲ್ಲಿ ಅರ್ಧಗಂಟೆಯ ಅವಧಿಯಲ್ಲಿ, ಸುಮಾರು ಇಪ್ಪತ್ತು ಸಾವಿರಕೋಟಿ ರೂ.ಗಳ ಮೌಲ್ಯದ ಗಂಗಾನದಿಯ ತೀರದಲ್ಲಿನ ಭೂಮಿಯನ್ನು ಉತ್ತರಾಖಂಡಕ್ಕೆ ವಾಪಸ್ಸು ಮಾಡಬೇಕೆಂಬ ನಿರ್ಣಯವನ್ನು ಸ್ವೀಕರಿಸಲಾಯಿತು.

ಇಂತಹ ಕಾರ್ಯಕ್ಷಮತೆಯ ಮೇರುವ್ಯಕ್ತಿತ್ವವು ಅನಂತ್ ಕುಮಾರ್ ಅವರದಾಗಿತ್ತು. ಡೆಹರಾಡೂನಿನ ಅವರ ಭೇಟಿಯಲ್ಲಿ ಅತ್ತಿಗೆ ಶ್ರೀಮತಿ ತೇಜಸ್ವಿನಿಯವರೂ ಅವರ ಜೊತೆಗಿದ್ದರು. ಆದರೆ, ಅನಂತಕುಮಾರ್ ತಮ್ಮತೀವ್ರ ಅನಾರೋಗ್ಯದ ಬಗ್ಗೆ ನಮಗೆ ಯಾವುದೇ ಸುಳಿವನ್ನೂ ನೀಡಲಿಲ್ಲ. ಇದ್ದಕ್ಕಿದ್ದಂತೆಯೇ ಅವರು ನಮ್ಮಿಂದ ದೂರವಾಗಿಬಿಟ್ಟರು. ಅನಂತ್ ಜೀ ಅನಂತದಲ್ಲಿ ಲೀನವಾದರು. ಉತ್ತರಾಖಂಡ ದೇವಭೂಮಿಯ ಪರವಾಗಿ ನಾನು ಆ ಮಹನೀಯರಿಗೆ ಹಾರ್ದಿಕ ಶ್ರದ್ಧಾಂಜಲಿಯನ್ನು ಸಲ್ಲಿಸುತ್ತಿದ್ದೇನೆ. ಓಂ ಶಾಂತಿ.

# ಆದರ್ಶ ರಾಜಕಾರಣಿಯ ಪ್ರತಿರೂಪ

ಪುಟ 2 ರಿಂದ ಗುರುತಿಸುವಂತೆ ಮಾಡುವಲ್ಲಿ ಶ್ರೀ ಅನಂತಕುಮಾರ್ ಅವರ ಪಾತ್ರ ಅತ್ಯಂತ ಪ್ರಮುಖವಾದದ್ದು.

ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಅನ್ನ, ಅಕ್ಷರ, ಆರೋಗ್ಯ ಈ ಮೂರೂ ಮಹತ್ವದ್ದು ಎಂದು ಹಿರಿಯರು ಹೇಳುತ್ತಾರೆ. ಇದಕ್ಕನುಗುಣವಾಗಿ ಶ್ರೀಮತಿ ತೇಜಸ್ವಿನಿಯವರು ಅದಮ್ಯ ಚೇತನ ಸಂಸ್ಥೆಯ ಮೂಲಕ ಅದನ್ನು ನೋಡಿಕೊಳ್ಳುತ್ತಿದ್ದಾರೆ. ಅದು ಅನ್ನದಾನವಿರಬಹುದು, ವಿದ್ಯಾದಾನವಿರಬಹುದು, ಪರಿಸರ ಸಂರಕ್ಷಣೆಯಿರಬಹುದು, ಇವೆಲ್ಲ ಕ್ಷೇತ್ರಗಳಲ್ಲಿ ಶ್ರೀ ಅನಂತಕುಮಾರ್ ತಮ್ಮ ಕೊಡುಗೆಯನ್ನು ನೀಡಿದ್ದನ್ನು ನಾವೆಲ್ಲ ನೋಡಿದ್ದೇವೆ. ಇಂದು ಶ್ರೀಮತಿ ತೇಜಸ್ವಿನಿಯವರು ಅದನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಅವರಿಗೆ ಹೆಚ್ಚು ಶಕ್ತಿಕೊಡುವಂಥ ಕೆಲಸಕಾರ್ಯಗಳನ್ನು ನಾವೆಲ್ಲರೂ ಮಾಡಬೇಕಾಗಿದೆ. ಕರ್ನಾಟಕ ರಾಜ್ಯ ಸರ್ಕಾರದ ಮಾನ್ಯ ಮುಖ್ಯ ಮಾತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರೂ ಕೂಡ ಸರ್ಕಾರದ ಕೊಡುಗೆಯನ್ನು ನೀಡಿದ್ದಾರೆ. ಶ್ರೀ ಅನಂತಕುಮಾರ್ ಅವರ ಮನಸ್ಸಿನಲ್ಲಿ "ಶ್ರೇಷ್ಠ ಭಾರತ, ಭವ್ಯ ಭಾರತ" ಎಂಬ ಕಲ್ಪನೆಯಿತ್ತು. ಅವರು ಆದರ್ಶ ರಾಜಕಾರಣಿಗಳು ಹೇಗಿರಬೇಕು ಎಂದು ತಮ್ಮ ನಡವಳಿಕೆಯ ಮುಖಾಂತರವೇ ತೋರಿಸಿಕೊಟ್ಟರು. ಅಂತಹ ಒಬ್ಬ ಧೀಮಂತ, ಮುತ್ಸದ್ಧಿ, ಭೌತಿಕವಾಗಿ ಇಂದು ನಮ್ಮೊಡನಿಲ್ಲ. ಆದರೆ ಪ್ರಾಯಶಃ ಅವರ ಆದರ್ಶಗಳು ಮತ್ತು ಉದಾತ್ತವಾದ ವಿಚಾರಧಾರೆಗಳು ಇವತ್ತಿಗೂ ನಮ್ಮನ್ನು ಎಚ್ಚರಿಸುವಂತಿವೆ. ನಮ್ಮ ಪಕ್ಷದ ಯಾವುದೇ ಕಾರ್ಯಕ್ರಮವಿರಲಿ, ರಾಜ್ಯಮಟ್ಟದ್ದಾಗಿರಲಿ ಅಥವಾ ದೇಶಮಟ್ಟದ್ದಾಗಿರಲಿ, ಅಲ್ಲಿ ಒಂದು ನಿಮಿಷ ನಾವೆಲ್ಲರೂ ಅವರ ಸ್ಮರಣೆಮಾಡಿಕೊಳ್ಳಬೇಕು.

ಶ್ರೀ ಅನಂತ್ ಜೀ ಅವರ ಕನಸನ್ನು ನನಸಾಗಿಸಲು ಅನಂತ ಪ್ರತಿಷ್ಠಾನ ಇವತ್ತು ಪ್ರಯತ್ನಿಸುತ್ತಿದೆ. ಅದರ ಮುಖಾಂತರ ಅವರ ಚಿಂತನೆಗಳು, ಸಂದೇಶಗಳು ಜನರಿಗೆ ತಲುಪುವಂತಹ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೀರಿ. ಇದನ್ನು ಅನಂತಪಥ ಪತ್ರಿಕೆಯ ಮೂಲಕ ಎಲ್ಲರಿಗೂ ತಲುಪಿಸುವಂತಹ ಕಾರ್ಯವನ್ನು ಕೂಡ ಮಾಡುತ್ತಿದ್ದೀರಿ. ಅನಂತಪಥ ಪತ್ರಿಕೆಯು ಮನೆ ಮನೆಯನ್ನು ತಲುಪಿ, ಎಲ್ಲರ ಮನದಲ್ಲಿ ಸಾಮಾಜಿಕ ಪ್ರಜ್ಞೆ ಮೂಡಿ ಬರಬೇಕು. ಇದು ನಮ್ಮ ಸಾಮಾಜಿಕ ಪರಿವರ್ತನೆಗೆ ಒಂದು ದಿಕ್ಕು ತೋರಿಸುವಂತಹ ಅತ್ಯಂತ ಒಳ್ಳೆಯ ಕಾರ್ಯವಾಗಿದೆ. ಹಿಂದಿನ ಸಂಚಿಕೆಗಳೂ ನನ್ನಲ್ಲಿವೆ.


ಅದರಲ್ಲಿ ಮೂಡಿ ಬಂದಿರುವ ಎಲ್ಲ ವಿಚಾರಗಳೂ ನನ್ನ ಗಮನದಲ್ಲಿವೆ. ಅವುಗಳನ್ನು ಕೂಲಂಕಷವಾಗಿ ಓದಿದ್ದೇನೆ. ೮ನೇ ಆವೃತ್ತಿಯನ್ನು ನಾನು ಬಹಳ ಸಂತೋಷದಿಂದ ಬಿಡುಗಡೆ ಮಾಡಿದ್ದೇನೆ. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮತ್ತು ಅವರ ತಂಡಕ್ಕೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸುತ್ತ, ಆ ದೇವರು ನಿಮಗೆಲ್ಲ ಇನ್ನೂ ಹೆಚ್ಚಿನ ಶಕ್ತಿಯನ್ನು ನೀಡಲಿ ಎಂದು ಪ್ರಾರ್ಥಿಸುತ್ತೇನೆ. ತಮಗೆಲ್ಲರಿಗೂ ಶುಭವಾಗಲಿ.

# ರಾಷ್ಟ್ರನಿಷ್ಠವಾದ ಪ್ರಾಮಾಣಿಕ ಕರ್ತೃತ್ವ

ರಾಜಕೀಯ ರಂಗದಲ್ಲಿ ನಾಯಕರಾಗಿ ಶ್ರೀ ಅನಂತ ಕುಮಾರ್ ಒಂದು ವಿಶಿಷ್ಟವಾದ ಛಾಪನ್ನು ಮೂಡಿಸಿ ಹೋಗಿರುತ್ತಾರೆ. ಅವರು ತಮ್ಮ ಚಿಕ್ಕ ವಯಸ್ಸಿನಿಂದಲೇ ಉದಾತ್ತವಾದ ಚಿಂತನೆಯನ್ನು ರೂಢಿಸಿಕೊಂಡು, ಆ ದಿಕ್ಕಿನಲ್ಲಿ ದೃಢವಾದ ಹೆಜ್ಜೆಗಳನ್ನು ಹಾಕುತ್ತ ಮುಂದೆ ನಡೆದರು. ಅವರು ವಿದ್ಯಾರ್ಥಿ ಪರಿಷತ್ತಿನ ಪೂರ್ಣಾವಧಿಯ ಕಾರ್ಯಕರ್ತರಾಗಿ ಇಡೀ ಪ್ರಾಂತ್ಯದಲ್ಲಿ ಪ್ರವಾಸ ಮಾಡುತ್ತಿದ್ದಾಗಿನಿಂದ ಅವರ ಕಾರ್ಯ ವೈಖರಿಯನ್ನು ಹತ್ತಿರದಿಂದ ನೋಡಿದವನು ನಾನು.

ರಾಜಕೀಯ ಕ್ಷೇತ್ರದಲ್ಲಿ ಇಂದು ರಾಜಕೀಯ ನಾಯಕರನ್ನು ನೋಡುವ ರೀತಿಯೇ ಅಷ್ಟು ಹಿತಕರವಾಗಿಲ್ಲ. ರಾಜಕೀಯ ಹಾಗೂ ಭ್ರಷ್ಟಾಚಾರ ಎರಡೂ ಪದಗಳು ಒಂದಕ್ಕೊಂದು ಸೇರಿಕೊಂಡಿರುವ ಹಾಗೆ ಭಾಸವಾಗುತ್ತದೆ. ಇಂದು ಒಬ್ಬ ವ್ಯಕ್ತಿ ರಾಜಕಾರಣದಲ್ಲಿದ್ದಾನೆ ಅಂದರೆ ಸಾಕು, ಅವನು ಯಾವ ಯಾವ ಅಡ್ಡದಾರಿಯನ್ನು ಹಿಡಿದು ಪ್ರವೇಶಿಸಿದ ಎಂದು ಜನ ತೀರ್ಮಾನ ಮಾಡಿಯೇ ಬಿಡುತ್ತಾರೆ. ಆದರೆ ಈ ಕ್ಷೇತ್ರದಲ್ಲೂ ಒಂದು ಪರಿವರ್ತನೆಯನ್ನು ತರಬಹುದು, ರಾಷ್ಟ್ರನಿಷ್ಠವಾದ ಪ್ರಾಮಾಣಿಕ ಕರ್ತೃತ್ವವನ್ನು ಬೆಳೆಸಿಕೊಳ್ಳಬಹುದು ಎನ್ನುವುದಕ್ಕೆ ಶ್ರೀ ಅನಂತಕುಮಾರ್ ಬಹು ದೊಡ್ಡ ಉದಾಹರಣೆ . ಅವರು ಬಿಜೆಪಿಯ ಕಾರ್ಯಕರ್ತರಾಗಿ ರಾಜಕೀಯ ರಂಗ ಪ್ರವೇಶ ಮಾಡಿದಾಗ, ಬಿಜೆಪಿ ಬಹಳ ದುರ್ಬಲವಾಗಿತ್ತು. ಬಹಳ ಕ್ಷೀಣ ಸ್ಥಿತಿಯಲ್ಲಿತ್ತು. ಅನಂತಕುಮಾರ್ ಅವರ ಕಾರ್ಯಪಟುತ್ವವನ್ನು ನೋಡಿ ಅವರಲ್ಲಿ ಸಂಘಟನೆಯನ್ನು ಬಲಪಡಿಸುವ ಕರ್ತೃತ್ವವಿದೆ ಎಂಬುದನ್ನು ಗುರುತಿಸಿ ಆರ್ ಎಸ್ ಎಸ್ ನ ಹಿರಿಯರು ಅವರು ರಾಜಕೀಯ ಕ್ಷೇತ್ರಕ್ಕೆ ಹೋಗಬೇಕು ಎಂದು ತೀರ್ಮಾನಿಸಿದರು. ತಮ್ಮ ಪ್ರತಿಭೆ, ಪರಿಶ್ರಮ, ದೂರಗಾಮಿ ಚಿಂತನೆ, ಇವೆಲ್ಲದರ ಪರಿಣಾಮವಾಗಿ ಶ್ರೀ ಅನಂತಕುಮಾರ್ ಕರ್ನಾಟಕದಲ್ಲಿ ಬಿಜೆಪಿ ಪಕ್ಷ ನೆಲೆಯೂರುವುದಕ್ಕೆ ಕಾರಣರಾದರು.

ರಾಜಕೀಯ ಕ್ಷೇತ್ರಕ್ಕೆ ನೆರವಾಗಬಲ್ಲಂಥ ಒಂದು ಸಂಸ್ಥೆಯನ್ನು ಕಟ್ಟಬೇಕು, ಈ ಕ್ಷೇತ್ರದಲ್ಲಿ ಕೆಲಸ ಮಾಡುವಂಥ ಕಾರ್ಯಕರ್ತರಿಗೆ ಒಂದು ಪ್ರೇರಣೆಯನ್ನು ನೀಡಿ, ಮಾರ್ಗದರ್ಶನ ಮಾಡಬಲ್ಲ, ವೈಚಾರಿಕ ನಿಷ್ಠೆಯನ್ನು ಅವರಲ್ಲಿ ಬೆಳೆಸುವ ಒಂದು ತರಬೇತಿ ಕೇಂದ್ರವನ್ನು ಕಟ್ಟಿ ಬೆಳೆಸಬೇಕು ಎಂಬುದು ಶ್ರೀ ಅನಂತಕುಮಾರ್ ಅವರ ಭವ್ಯ ಕನಸಾಗಿತ್ತು. ರಾಷ್ಟ್ರ ನಿರ್ಮಾಣದಲ್ಲಿ ರಾಜಕಾರಣಕ್ಕೆ ಕೂಡ ಒಂದು ಬಹಳ ಮುಖ್ಯವಾದ ಪಾತ್ರವಿದೆ. ರಾಜಕೀಯ ನಿಪುಣತೆ ಇರುವ, ಧ್ಯೇಯನಿಷ್ಠ, ಪ್ರಾಮಾಣಿಕ ರಾಜಕೀಯ ನೇತೃತ್ವ ಎದ್ದು ನಿಲ್ಲಬೇಕು. ಇದಕ್ಕೆ ಶ್ರೀ ಅನಂತಕುಮಾರ್ ಒಂದು ಪ್ರತ್ಯಕ್ಷ ನಿದರ್ಶನ. ಈ ಉದ್ದೇಶದಿಂದಲೇ ಅನಂತಕುಮಾರ್ ಪ್ರತಿಷ್ಠಾನ ಸ್ಥಾಪಿತವಾಗಿದೆ. ಶ್ರೀ ಅನಂತಕುಮಾರ್ ಅವರ ಚಿಂತನೆಗಳ, ಕಾರ್ಯಕರ್ತೃತ್ವದ ಪ್ರೇರಣೆಯನ್ನು ಪಡೆದು ನೂರಾರು ಜನ ಅನಂತಕುಮಾರ್ ತಯಾರಾಗಬೇಕು ಎಂಬುದೇ ಈ ಪ್ರತಿಷ್ಠಾನದ ಗುರಿ. ಒಬ್ಬ ಸಾಮಾನ್ಯ ವ್ಯಕ್ತಿಯ ಜೀವನ ಅವನ ಮರಣದೊಂದಿಗೆ ಕೊನೆಗೊಳ್ಳುತ್ತದೆ. ಆದರೆ ಸಾಧಕರ, ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಿದ ಮಹಾನ್ ಪುರುಷರ ಜೀವನ ಅವರ ಮರಣದ ನಂತರವೂ ಮುಂದುವರೆಯುತ್ತದೆ; ಅವರ ಜೀವನದಿಂದ ಪ್ರೇರಣೆ ಪಡೆದು ಅದೇ ಹಾದಿಯಲ್ಲಿ ಮುನ್ನಡೆಯುವ ಕಾರ್ಯಕರ್ತರು ತಯಾರಾಗುತ್ತಾರೆ. ಅವರ ನೆನಪನ್ನು ಚಿರಸ್ಥಾಯಿಗೊಳಿಸುವುದಕ್ಕಾಗಿಯೇ ಈ ಸಂಸ್ಥೆಯನ್ನು ಹುಟ್ಟಿಹಾಕಲಾಗಿದೆ. ಅವರ ವ್ಯಕ್ತಿತ್ವ, ಇಂದಿನ ಯುವಪೀಳಿಗೆಗೆ ಒಂದು ಪ್ರೇರಕ ಶಕ್ತಿ, ಒಂದು ಮಾರ್ಗದರ್ಶಕ ಶಕ್ತಿಯಾಗಬೇಕು. ಆ ವ್ಯಕ್ತಿತ್ವದ ನೆನಪನ್ನು ಚಿರಸ್ಥಾಯಿಗೊಳಿಸಬೇಕು.



ಶ್ರೀ ಪಿ.ವಿ. ಕೃಷ್ಣ ಭಟ್
ಅಧ್ಯಕ್ಷರು, ಅನಂತಕುಮಾರ್ ಪ್ರತಿಷ್ಠಾನ

ನಾನು ಈಗಾಗಲೇ ಹೇಳಿದಂತೆ ಅನಂತಕುಮಾರ್ ಅವರು ಸಾಮಾನ್ಯ ರಾಜಕಾರಣಿಗಳಲ್ಲ. ಅವರು ರಾಷ್ಟ್ರ ಚಿಂತಕರು, ರಾಷ್ಟ್ರ ನಿರ್ಮಾಣದ ಹಾದಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಂಥ ಸಾಧಕರು. ಮುಂದಿನ ಯುವಪೀಳಿಗೆಗೆ ಅವರ ಚಿಂತನೆಗಳು ನೆರವಾಗಲಿ, ಅಂತಹ ವ್ಯಕ್ತಿಗಳು ರೂಪುಗೊಳ್ಳಲಿ ಎಂಬ ಸದುದ್ದೇಶದಿಂದ ಅನಂತಕುಮಾರ್ ಪ್ರತಿಷ್ಠಾನ ಕೆಲಸ ಮಾಡುತ್ತಿದೆ. ಈ ಪ್ರತಿಷ್ಠಾನದ ಜೊತೆಯಲ್ಲಿ ನಾನೂ ಕೈಜೋಡಿಸಿಲು ಶ್ರೀಮತಿ ತೇಜಸ್ವಿನಿಯವರು ನನಗೊಂದು ಅವಕಾಶ ಮಾಡಿಕೊಟ್ಟಿದ್ದಾರೆ. ಈ ಕಾರ್ಯದಲ್ಲಿ ಶ್ರೀ ಸದಾನಂದ ಗೌಡರು ಕೂಡ ಕೈಜೋಡಿಸಿ ಮಾರ್ಗದರ್ಶನ ನೀಡಬೇಕು ; ಕರ್ನಾಟಕ ಹಾಗೂ ದೆಹಲಿಯಲ್ಲಿ ಇದಕ್ಕೆ ಅವಶ್ಯಕವಾದ ನೆರವನ್ನು ದೊರಕಿಸಿಕೊಡಲು ತಮ್ಮ ಪೂರ್ಣ ಸಹಕಾರವನ್ನು ನೀಡಬೇಕು ಎಂದು ಈ ಸಂದರ್ಭದಲ್ಲಿ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಅನಂತಪಥದ ಬಿಡುಗಡೆ ಮಾಡಿದ ಶ್ರೀ ಸದಾನಂದ ಗೌಡರು ಇಂದು ಅನಂತಕುಮಾರ್ ಅವರ ಬಗ್ಗೆ ಬಹಳ ಭಾವಪೂರ್ಣವಾಗಿ ಮಾತನಾಡಿದ್ದಾರೆ. ಕರ್ನಾಟಕದಲ್ಲಿ ಬಿಜೆಪಿ ಪಕ್ಷವನ್ನು ಕಟ್ಟಿ ಬೆಳೆಸುವುದರಲ್ಲಿ ಅವರು ಹಾಗೂ ಅನಂತಕುಮಾರ್ ಜೊತೆಜೊತೆಯಾಗಿ ಕೆಲಸ ಮಾಡಿದವರು. ಹಾಗಾಗಿ ಅವರಿಗೆ ಭಾವನೆಗಳು ಉಕ್ಕಿಬರುವುದು ಸ್ವಾಭಾವಿಕ. ತಮ್ಮ ಭಾವಪೂರ್ಣ ಮಾತುಗಳಿಂದ ಶ್ರೀ ಅನಂತಕುಮಾರ್ ಅವರ ವ್ಯಕ್ತಿತ್ವದ ಮೇಲೆ ಹೊಚ್ಚ ಹೊಸ ಬೆಳಕನ್ನು ಚೆಲ್ಲಿ, ಶ್ರೀ ಅನಂತಕುಮಾರ್ ನಮ್ಮೆಲ್ಲರ ಕಣ್ಣುಗಳ ಮುಂದೆ ಮತ್ತೆ ಎದ್ದು ನಿಂತಿರುವ ಹಾಗೆ ಮಾಡಿದ್ದಾರೆ. ಅವರಿಗೆ ನಾನು ಅನಂತ ಪ್ರತಿಷ್ಠಾನದ ಅಧ್ಯಕ್ಷನಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

# ಸಂಘಟನೆ-ಸಮಾಜ-ರಾಷ್ಟ್ರ ಸೇವೆ

ಡಾ. ವಿಷ್ಣುಕಾಂತ್ ಚಟಪಲ್ಲಿ, ಕುಲಪತಿಗಳು, ಕರ್ನಾಟಕ ರಾಜ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾನಿಲಯ, ಗದಗ

ಅನಂತಕುಮಾರ್ ಪ್ರತಿಷ್ಠಾನ ಹಾಗೂ ಅದಮ್ಯ ಚೇತನಗಳ ಅನೇಕ ಜನಪರ ಕಾರ್ಯಗಳು, ವಿಚಾರಗಳು, ಸೇವಾ ಚಟುವಟಿಕೆಗಳು, ಇತ್ಯಾದಿಗಳನ್ನು ಬಿಂಬಿಸುವಂತಹ ಲೇಖನಗಳನ್ನೊಳಗೊಂಡಿರುವ ಅನಂತಪಥ ಪತ್ರಿಕೆಯನ್ನು ಇಂದು ಬಿಡುಗಡೆ ಮಾಡಿರುವ ಸನ್ಮಾನ್ಯ ಸದಾನಂದ ಗೌಡರು, ಅನಂತಕುಮಾರ್ ಅವರ ಆಪ್ತ ಮಿತ್ರರು. ಇದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯವಾಗಿದೆ.

ಸನ್ಮಾನ್ಯ ಶ್ರೀ ಸದಾನಂದ ಗೌಡರು, ಅನಂತಕುಮಾರ್ ಅವರ ಬಗ್ಗೆ ಬಹಳ ಕಳಕಳಿಯಿಂದ ಹಾಗೂ ಹೃದಯವಂತಿಕೆಯಿಂದ ಮಾತನಾಡಿದ್ದಾರೆ. ಮಾನ್ಯ ಸಚಿವರು, ಮೂವತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ಅನಂತಕುಮಾರ್ ಅವರ ಜೊತೆ ಕೆಲಸ ಮಾಡಿದ್ದಾರೆ. ಅನಂತಕುಮಾರ್ ಅವರ ಅಕಾಲಿಕ ನಿಧನದ ನಂತರ ಇಂದು ಮಾನ್ಯ ಸಚಿವರು ಅನಂತಕುಮಾರ್ ನಿರ್ವಹಿಸುತ್ತಿದ್ದ ಇಲಾಖೆಯನ್ನೇ ಪ್ರತಿನಿಧಿಸುತ್ತಿದ್ದಾರೆ. ಅನಂತಕುಮಾರ್ ಅವರು ಪೂರ್ಣಗೊಳಿಸಲು ಸಾಧ್ಯವಾಗದೆ ಇದ್ದ ಕೆಲಸವನ್ನು ಇಂದು ತಾವು ಪೂರ್ಣಗೊಳಿಸಬೇಕು ಎಂಬ ಸದಿಚ್ಛೆಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಬೇವು ಮಿಶ್ರಿತ ರಸಗೊಬ್ಬರ, ಜನೌಷಧಿ ಕೇಂದ್ರಗಳು, ಫಾರ್ಮಸಿ, ಈ ಎಲ್ಲ ಕ್ಷೇತ್ರಗಳಲ್ಲೂ ಅನಂತಕುಮಾರ್ ಅವರು ತಮ್ಮ ಛಾಪನ್ನು ಮೂಡಿಸಿಹೋಗಿದ್ದಾರೆ. ಈ ಕಾರ್ಯಗಳನ್ನು ಮುಂದುವರೆಸುವಂತಹ ಕಾರ್ಯವನ್ನು ಮಾನ್ಯ ಸಚಿವರು ಮಾಡುತ್ತಿದ್ದಾರೆ. ಪ್ರತಿಷ್ಠಾನದ ಪರವಾಗಿ ನಾನು ಅವರಿಗೆ ಧನ್ಯವಾದಗಳನ್ನರ್ಪಿಸಲಿಚ್ಛಿಸುತ್ತೇನೆ.

ಮಾನ್ಯ ಸಚಿವರು, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದಾಗ, ರಾಜ್ಯಾಧ್ಯಕ್ಷರಾಗಿದ್ದಾಗ ಹಾಗೂ ಕೇಂದ್ರ ಮಂತ್ರಿಗಳಾಗಿದ್ದಾಗ, ಶ್ರೀ ಅನಂತಕುಮಾರ್ ಅವರ ಜೊತೆ ಅನೇಕ ಸಂದರ್ಭಗಳಲ್ಲಿ ಒಡನಾಡಿದ್ದಾರೆ. ಮಾನ್ಯ ಸಚಿವರೂ ಕೂಡ ಬಹಳ ಸರಳವಾದ ವ್ಯಕ್ತಿ. ಅವರು ಕೂಡ ಶ್ರೀ ಅನಂತಕುಮಾರ್ ಅವರಂತೆಯೇ ಜನಸಾಮಾನ್ಯ ವರ್ಗದಿಂದ ರಾಜಕೀಯವನ್ನು ಪ್ರವೇಶಿಸಿದವರು. ಅವರ ಹಾಗೆಯೇ ಸಂಘಟನಾ ಕಾರ್ಯವನ್ನು ಮಾಡಿದವರು. ಶ್ರೀ ಅನಂತಕುಮಾರ್, ಶ್ರೀ ಸದಾನಂದ ಗೌಡರು, ಶ್ರೀ ಅರುಣ್ ಜೇಟ್ಲಿ, ಶ್ರೀಮತಿ ಸುಷ್ಮಾ ಸ್ವರಾಜ್, ಶ್ರೀ ಮನೋಹರ್ ಪರಿಕ್ಕರ್ ಎಲ್ಲರೂ ಕೂಡ ತಮ್ಮ ಜೀವನದಲ್ಲಿ ಸಂಘಟನೆ, ಸಮಾಜ ಮತ್ತು ರಾಷ್ಟ್ರ ಈ ಮೂರೂ ವಿಷಯಗಳನ್ನೂ ಜೊತೆ ಜೊತೆಯಾಗಿ ತೆಗೆದುಕೊಂಡು ಹೋದವರು. ಇವರೆಲ್ಲರ ಕಾರ್ಯವನ್ನು ಇಂದು ಮತ್ತೊಮ್ಮೆ ಸಮಾಜದಲ್ಲಿ ಪ್ರತಿಬಿಂಬಿಸುವ ಅವಶ್ಯಕತೆಯಿದೆ. ಆ ವಿಚಾರಗಳಿಗೆ ವೈಚಾರಿಕತೆಯನ್ನು, ರಾಷ್ಟ್ರೀಯತೆಯನ್ನು, ಸಾಮಾಜಿಕ ಕಳಕಳಿಯನ್ನು, ನೇತೃತ್ವವನ್ನು ನೀಡುವ ಅಗತ್ಯವಿದೆ. ಈ ಎಲ್ಲ ಕಾರ್ಯಗಳನ್ನು ಮುಂದುವರೆಸಬೇಕು ಎಂದು ಶ್ರೀ ಅನಂತಕುಮಾರ್ ಅವರ ಜೊತೆಗಾರರ ಮತ್ತು ಅವರ ಅನೇಕ ಕಾರ್ಯಕರ್ತರ ಮನಸ್ಸಿನಲ್ಲಿದೆ.



ಇಂದಿನ ನಾವು ಎದುರಿಸುತ್ತಿರುವ ಕರೋನಾ ಅಥವಾ ಇತರ ಸಮಸ್ಯೆಗಳಿಗೆ ಅನಂತಕುಮಾರ್ ಅವರು ಇದ್ದಿದ್ದರೆ ಏನು ಮಾಡುತ್ತಿದ್ದರು, ಅವರ ದೃಷ್ಟಿಕೋನವೇನಿರುತ್ತಿತ್ತು ಎನ್ನುವ ಪ್ರಶ್ನೆ ಎಲ್ಲರ ಮನಸ್ಸಿನಲ್ಲೂ ಏಳುತ್ತದೆ. ಆದರೆ ಈಗ ಅವರು ಅಂದುಕೊಂಡಿದ್ದ ಎಲ್ಲ ಜನಪರ ಕಾರ್ಯಗಳೂ ಮುಂದುವರೆಯಬೇಕು, ಅವರ ಮನಸ್ಸಿನ ಸಂಕಲ್ಪಗಳು ಕಾರ್ಯಗತವಾಗಬೇಕು ಎಂಬ ಉದ್ದೇಶದಿಂದ ಮಾನ್ಯ ಪ್ರೊಫೆಸರ್ ಶ್ರೀ ಪಿ. ವಿ. ಕೃಷ್ಣಭಟ್ ಅವರ ಅಧ್ಯಕ್ಷತೆಯಲ್ಲಿ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಡಾ. ಶ್ರೀನಾಥ್ ಮತ್ತು ಇತರ ಸ್ನೇಹಿತರು ಸೇರಿ ಅನಂತಕುಮಾರ್ ಪ್ರತಿಷ್ಠಾನವನ್ನು ಸ್ಥಾಪಿಸಿದ್ದಾರೆ. ಅವರೆಲ್ಲರ ಜೊತೆಗೂಡಿ ನಾವು ಈ ಕಾರ್ಯವನ್ನು ಮುಂದುವರೆಸುವಂತಹ ಪ್ರಯತ್ನವನ್ನು ಮಾಡಬೇಕಾಗಿದೆ. ಕಳೆದ ಏಳು ತಿಂಗಳಿನಿಂದ ಅನಂತಪಥ ಮಾಸಪತ್ರಿಕೆಯನ್ನು ಹೊರ ತರುತ್ತಿರುವುದು ಈ ಎಲ್ಲ ಪ್ರಯತ್ನಗಳ ಒಂದು ಮುಖ್ಯವಾದ ಭಾಗವಾಗಿದೆ. ಶ್ರೀ ಟಿ.ಎಸ್. ಗೋಪಾಲ್ ಅವರ ಸಂಪಾದಕತ್ವವಿರುವ ಈ ಪತ್ರಿಕೆಯಲ್ಲಿ ಪ್ರಾಂತೀಯ, ರಾಷ್ಟ್ರೀಯ, ಸೈದ್ಧಾಂತಿಕ ವಿಷಯಗಳನ್ನೊಳಗೊಂಡಿರುವ ಲೇಖನಗಳು ಪ್ರಕಟವಾಗುತ್ತಿವೆ.

ಅನಂತಕುಮಾರ್ ಅವರು ಹಮ್ಮಿಕೊಂಡಿದ್ದ ಅನೇಕ ಕಾರ್ಯ ಚಟುವಟಿಕೆಗಳನ್ನು ಶ್ರೀಮತಿ ತೇಜಸ್ವಿನಿ ಹಾಗೂ ಎಲ್ಲ ಸ್ನೇಹಿತರು ಅನಂತಕುಮಾರ್ ಪ್ರತಿಷ್ಠಾನ ಹಾಗೂ ಅದಮ್ಯ ಚೇತನದ ಮೂಲಕ ಯಶಸ್ವಿಯಾಗಿ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಅನಂತಕುಮಾರ್ ಅವರ ಆಶೀರ್ವಾದ ಹಾಗೂ ಪ್ರೇಮ ಎಲ್ಲರಿಗೂ ಲಭಿಸಲಿ, ಪ್ರತಿಷ್ಠಾನದ ಚಟುವಟಿಕೆಗಳು ಇನ್ನೂ ವಿಸ್ತಾರವಾಗಿ ಮುಂದುವರೆಯಲಿ ಮತ್ತು ಅದಕ್ಕೆ ಶಕ್ತಿ ತುಂಬುವಂತಹ ಹಾಗೂ ಇನ್ನೂ ಹೆಚ್ಚು ಹೆಚ್ಚು ಕೆಲಸ ಮಾಡುವಂತಹ ಅವಕಾಶ ನಮಗೆಲ್ಲರಿಗೂ ಸಿಗಲಿ ಎಂದು ಹಾರೈಸುತ್ತೇನೆ.

# ಕೃತಕ ಬುದ್ಧಿಮತ್ತೆಯ ಪ್ರಭಾವ-ಪ್ರಯೋಜನ

**ಶ್ರೀಮತಿ ವಿಜಯ ದೀಪ್ತಿ**
ನಿರ್ದೇಶಕರು, ಟಾಟಾ ಎಐಜಿ ಜನರಲ್‌ಇನ್ಸೂರೆನ್ಸ್

ಸಾರ್ವಜನಿಕ ಜೀವನದಲ್ಲಿ ಕೃತಕ ಬುದ್ಧಿಮತ್ತೆ (Artificial Intelligence – ಎಐ). ಇದು ಅಷ್ಟು ಸರಳವಾದ ವಿಷಯವಲ್ಲವಾದರೂ, ಹವಾಮಾನದ ಮುನ್ಸೂಚನೆಯ ಕ್ಷೇತ್ರದಲ್ಲಿ ಇದನ್ನು ದೀರ್ಘಕಾಲದಿಂದ ಉಪಯೋಗಿಸುತ್ತಿರುವುದರಿಂದಲೂ , ವಿಮಾ ಕ್ಷೇತ್ರದ ವೃತ್ತಿಯಲ್ಲಿ ನಾನು ಇದರ ಉಪಯೋಗವನ್ನು ದೀರ್ಘ ಕಾಲದಿಂದ ನೋಡುತ್ತಾ ಬಂದಿರುವುದರಿಂದಲೂ ಕೃತಕ ಬುದ್ಧಿಮತ್ತೆಯ ಉಗಮ ಮತ್ತು ಪ್ರಭಾವದ ಕೆಲವು ಅಂಶಗಳನ್ನು ಇಲ್ಲಿ ಉಲ್ಲೇಖ ಮಾಡಬಹುದೆಂದು ಭಾವಿಸುತ್ತೇನೆ.

ಕಳೆದ ೬೦ ವರ್ಷಗಳಿಂದ ಹಲವಾರು ಕ್ಷೇತ್ರಗಳಲ್ಲಿ ಬಳಸಲಾಗುತ್ತಿರುವ ಕೃತಕ ಬುದ್ಧಿಮತ್ತೆ ನಮ್ಮ ಉದ್ಯಮ ಕ್ಷೇತ್ರದಲ್ಲಿ ಬಹಳ ದೊಡ್ಡ ಪ್ರಭಾವವನ್ನು ಬೀರಿದೆ. ಹವಾಮಾನ ವೈಪರೀತ್ಯಗಳಿಂದ ಆಗಬಹುದಾದ ಅನಾಹುತಗಳನ್ನು ಮೊದಲೇ ತಿಳಿಯಲು ಅಂದರೆ ಯಾವಾಗ ಬಿರುಗಾಳಿ ಚಂಡಮಾರುತಗಳು ಏಳಬಹುದು, ವಾತಾವರಣದ ಏರಿಳಿತಗಳಾಬಹುದು ಎಂದು ಮೊದಲೇ ತಿಳಿದು ಇದರಿಂದಾಗಬಹುದಾದ ಅನಾಹುತಗಳಿಗೆ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಲು ಕೃತಕ ಬುದ್ಧಿಮತ್ತೆಯನ್ನು ಈಗಾಗಲೇ ಹಲವಾರು ವರ್ಷಗಳಿಂದ ಉಪಯೋಗಿಸಲಾಗುತ್ತಿದೆ. ಇನ್ನೂ ಅನೇಕ ಸಾರ್ವಜನಿಕ ಕ್ಷೇತ್ರಗಳಲ್ಲಿ ಇದರ ಉಪಯೋಗದ ಬಗ್ಗೆ ಬಹಳಷ್ಟು ಪ್ರಯೋಗಗಳು ನಡೆಯುತ್ತಿವೆ.

ಕಳೆದ ೨೫ ವರ್ಷಗಳಿಂದ ವೈದ್ಯಕೀಯ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆಯನ್ನು ವ್ಯಾಪಕವಾಗಿ ಉಪಯೋಗಿಸಲಾಗುತ್ತಿದೆ. ' ಇದು ಕೃತಕ ಬುದ್ಧಿಮತ್ತೆಯಲ್ಲ , ವೃದ್ಧಿಸುತ್ತಿರುವ ಬುದ್ಧಿಮತ್ತೆ ' ಎಂದು ಒಬ್ಬ ಭಾಷಣಕಾರರು ಹೇಳುವುದನ್ನು ಕೇಳಿದೆ. ಸ್ವಾಸ್ಥ್ಯ ಪಾಲನೆಯ ವೃತ್ತಿಪರರು ಹೊಸ ಔಷಧಿಯ ಆವಿಷ್ಕಾರದ ಬಗ್ಗೆ ಅಥವಾ ರೋಗ ಲಕ್ಷಣದ ಬಗ್ಗೆ ತಿಳಿದು ಪರಿಹಾರೋಪಾಯದ ಉತ್ತಮ ನಿರ್ಧಾರಕ್ಕೆ ಬರಲು ಕೃತಕ ಬುದ್ಧಿಮತ್ತೆ ಸಹಾಯ ಮಾಡುತ್ತದೆ. ಕ್ಯಾನ್ಸರ್ ವ್ಯಾಧಿಯ ಕ್ಷೇತ್ರಕ್ಕೆ ಸಂಬಂಧ ಪಟ್ಟಂತೆ ಕೃತಕ ಬುದ್ಧಿಮತ್ತೆಯ ಉಪಯೋಗದ ಬಗ್ಗೆ ವಿಸ್ತೃತ ಕಾರ್ಯ ನಡೆಯುತ್ತಿದೆ. ಹೊಸ ಔಷಧಿಗಳ ಆವಿಷ್ಕಾರವಷ್ಟೇ ಅಲ್ಲದೆ ರೋಗದ ಹರಡುವಿಕೆಯನ್ನು ಕಂಡುಹಿಡಿಯುವುದು ಇದರ ಇನ್ನೊಂದು ಉಪಯೋಗ. ಇತ್ತೀಚಿನ ಉದಾಹರಣೆಯೆಂದರೆ ಕಳೆದ ವರ್ಷ ಇಡೀ ಪ್ರಪಂಚವನ್ನು ನಡುಗಿಸಿದ ಕೋವಿಡ್ ನಮ್ಮ ದೇಶದಲ್ಲಿ ಯಾವ ಪ್ರಮಾಣದಲ್ಲಿ ಹರಡುತ್ತಿದೆ ಎಂಬುದನ್ನು ತಿಳಿಯುವುದು. ರೋಗವು ವೇಗವಾಗಿ ಹರಡುತ್ತಿರುವ ಪ್ರದೇಶಗಳನ್ನು ಕಂಡುಹಿಡಿದು ಇದನ್ನು ತಡೆಯಲು ಬೇಕಾದ ಕಾರ್ಯಾಚರಣೆಯ ಬಗ್ಗೆ ಕೃತಕ ಬುದ್ಧಿಮತ್ತೆಯನ್ನು ವಿಸ್ತೃತವಾಗಿ ಬಳಸಲಾಗಿದೆ. ಇದಕ್ಕಾಗಿ ನಿರ್ದಿಷ್ಟ ಎಐ ಮಾದರಿಗಳನ್ನು ಬಳಸಲಾಗಿದೆ. ಇದು ಐಸಿಎಂಆರ್ ಮತ್ತು ಇತರ ಕಾರ್ಯ ನೀತಿಜ್ಞರಿಗೆ ಅಗತ್ಯವಾದ ನಿರ್ಧಾರ ತೆಗೆದುಕೊಳ್ಳಲು ಬಹಳ ಸಹಾಯ ಮಾಡಿದೆ ಮತ್ತು ಇಡೀ ಜಗತ್ತಿಗೆ ಭಾರತ ಹೇಗೆ ಕೋವಿಡ್ ಸೋಂಕನ್ನು ಯಶಸ್ವಿಯಾಗಿ ನಿರ್ವಹಿಸಿತು ಎಂಬುದನ್ನು ತೋರಿಸಿದೆ.

ಕೃತಕ ಬುದ್ಧಿಮತ್ತೆಯನ್ನು ಪ್ರಯೋಗ ಮಾಡುತ್ತಿರುವ ಇನ್ನೊಂದು ಕ್ಷೇತ್ರವೆಂದರೆ ಮಾನವನ ಯೋಗಕ್ಷೇಮದ ವಿಚಾರ. ಈ ದಿಶೆಯಲ್ಲಿ ಕೂಡ ಈಗ ಸಾಕಷ್ಟು ಪ್ರಯೋಗಗಳು ನಡೆಯುತ್ತಿವೆ. ಉದಾಹರಣೆಗೆ ಇಂದು ನಾವು ನಡಿಗೆಯಲ್ಲಿ ಎಷ್ಟು ಹೆಜ್ಜೆಗಳನ್ನು ಹಾಕಿದ್ದೇವೆ ಎಂಬ ವೈಯಕ್ತಿಕ ಮಾಹಿತಿಯನ್ನು ನಮ್ಮ ಮೊಬೈಲ್ ಗಳ ಮೂಲಕ ನಾವು ಅರಿಯಬಲ್ಲವರಾಗಿದ್ದೇವೆ. ಹೀಗೆ ಕೃತಕ ಬುದ್ಧಿಮತ್ತೆ ಈಗ ನಮ್ಮ ವೈಯಕ್ತಿಕ ಜೀವನವನ್ನು ಕೂಡ ಪ್ರವೇಶಿಸಿದೆ. ಮುಂದೆ ನಮ್ಮ ರಕ್ತದೊತ್ತಡ, ಆಕ್ಸಿಜನ್ ಪ್ರಮಾಣ, ಇತ್ಯಾದಿಗಳನ್ನು ತಿಳಿಯಲು ಎಐ ಹೊಸ ಹೊಸ ಸಾಧನಗಳನ್ನು ಪರಿಚಯಿಸಲಿದೆ ಮತ್ತು ನಮ್ಮ ಸ್ವಂತ ಯೋಗಕ್ಷೇಮವನ್ನು ನಾವೇ ನೋಡಿಕೊಳ್ಳಲು ಈ ಸಾಧನಗಳು ನಮಗೆ ಸಹಾಯ ಮಾಡಲಿವೆ. ಹೀಗೆ ಎಐ ನಮ್ಮ ವೈಯಕ್ತಿಕ ಜೀವನದಲ್ಲೂ ಕೂಡ ಬಹಳ ಮಹತ್ವದ ಪಾತ್ರವನ್ನು ವಹಿಸಲಿದೆ.



ಎಐ ಬಳಕೆಯ ಇನ್ನೊಂದು ಕ್ಷೇತ್ರವೆಂದರೆ ಕೃಷಿ ಕ್ಷೇತ್ರ. ಈ ಕ್ಷೇತ್ರದಲ್ಲಿ ನಮ್ಮ ಸಂಸ್ಥೆಯವರು ಅಧ್ಯಯನ ಮಾಡುತ್ತಿರುವ ವಿಷಯ ರಾಸಾಯನಿಕ ಗೊಬ್ಬರದ ಪೂರೈಕೆ. ಇದು ಪ್ರಧಾನವಾಗಿ ಭೂಮಿಯ ಸ್ಥಿತಿಯ ಬಗ್ಗೆ ನಿರ್ಧಾರಿತವಾಗಿರುತ್ತದೆಯೇ ಹೊರತು ರಾಸಾಯನಿಕ ಗೊಬ್ಬರವನ್ನು ಎರಚುವುದಲ್ಲ. ನಾವು ಗೊತ್ತುಮಾಡಿಕೊಳ್ಳಬೇಕಾದುದೇನೆಂದರೆ ಆ ನಿರ್ದಿಷ್ಟ ಭೂಮಿಗೆ, ನಿರ್ದಿಷ್ಟ ಬೆಳೆಗೆ ಯೋಗ್ಯವಾದ ಗೊಬ್ಬರ ಯಾವುದೆಂದು. ಇದು ಕೇವಲ ಅನ್ವೇಷಣೆಯಲ್ಲ, ಎಐನಿಂದ ದೊರೆತ ಮಾಹಿತಿಯನ್ನು ಜಗತ್ತಿನ ಹಲವಾರು ಪ್ರದೇಶಗಳಲ್ಲಿ ಕಾರ್ಯರೂಪಕ್ಕೆ ತರಲಾಗಿದೆ. ರೈತರು ಕೂಡ ಇದರಿಂದ ಉಪಯೋಗವನ್ನು ಪಡೆದಿದ್ದಾರೆ. ಬೀಜಗಳ ನಿರ್ವಹಣೆ, ಬೆಳೆಯ ನಿರ್ವಹಣೆ, ಉಳುಮೆ ಮಾಡಲು ಯಾವುದು ತಕ್ಕ ಸಮಯ ಎಂಬುದನ್ನು ತಿಳಿಸಲು ಎಐ ನಮಗೆ ಮಾರ್ಗೋಪಾಯವನ್ನು ಸೂಚಿಸುತ್ತದೆ. ಕೃಷಿ ಕ್ಷೇತ್ರದಲ್ಲಿ ಎಐ ಅನ್ನು ವ್ಯಾಪಕವಾಗಿ ಬಳಸಲು ಮತ್ತು ಕೃಷಿಕಾರರಿಗೆ ಅಧಿಕ ಇಳುವರಿ ಮತ್ತು ಸಂಭಾವನೆಯನ್ನು ನೀಡಲು ಸಾಕಷ್ಟು ಪ್ರಯೋಗಗಳು ನಡೆಯುತ್ತಿವೆ. ಹಾಗೆ ನೋಡಿದರೆ ಇದು ಹೊಸದೇನೂ ಅಲ್ಲ, ೧೦ರಿಂದ ೧೫ವರ್ಷಗಳಿಂದಲೇ ಕೃಷಿ ಕ್ಷೇತ್ರದಲ್ಲೂ ಕೂಡ ಎಐ ಕಾರ್ಯೋನ್ಮುಖವಾಗಿದೆ. ಕೇವಲ ಭಾರತದಲ್ಲಿ ಮಾತ್ರವಲ್ಲ, ಪ್ರಪಂಚದ ಇತರ ರಾಷ್ಟ್ರಗಳಲ್ಲೂ ಅನೇಕ ಪ್ರಯೋಗಗಳು ನಡೆದಿದ್ದು ಯಶಸ್ಸನ್ನೂ ಕಂಡಿವೆ.

ಇನ್ನು ಶಿಕ್ಷಣ ಕ್ಷೇತ್ರ. ವೈಯಕ್ತಿಕ ಬೆಳವಣಿಗೆ ಮತ್ತು ವೈಯಕ್ತಿಕ ಶಿಕ್ಷಣದ ಕಾರ್ಯಕ್ರಮಗಳು, ಇಡೀ ಜ್ಞಾನಗ್ರಹಣ ಮತ್ತು ಶಿಕ್ಷಣ ಅಭಿವೃದ್ಧಿಯಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಇಂದು ನಮಗೆ ತಿಳಿದಿರುವ ಹಾಗೆ ಪ್ರತಿಯೊಬ್ಬರ ಕಲಿಕೆ ಹಾಗೂ ಪ್ರವೃತ್ತಿ ಕೂಡ ವಿಭಿನ್ನವಾಗಿರುತ್ತದೆ. ಹೀಗಾಗಿ ಈ ದಿಶೆಯಲ್ಲಿ ಎಐ ಬಹು ದೊಡ್ಡ ಪಾತ್ರವನ್ನು ವಹಿಸಲಿದೆ.

## ಅದಮ್ಯೋತ್ಸವದ ಸಂಕಲ್ಪ

ಬಂದಿತದೋ....ಹೊಸವರ್ಷ
ಸಂಭ್ರಮದ ಅದಮ್ಯೋತ್ಸವ
ಹಬ್ಬದ ಸಡಗರವೆಮಗೆ ಮೂರುದಿನ
ಎತ್ತ ನೋಡಿದರೂ ಜನ-ಜಾತ್ರೆ
ಸಗ್ಗವೇ ಧರೆಗಿಳಿದುಬಂದಂತೆ

ಓ..ಯುವಜನತೆಯೇ..ಏಳಿ ಎದ್ದೇಳಿ
ಮೈಮರೆಯದಿರಿ ಕುಡಿತ ಕುಣಿತದಮಲಿನಲಿ
ಎಷ್ಟು ಜನ್ಮದ ಪುಣ್ಯವೋ ಜನಿಸಿದಿರಿ
ಯೋಗಭೂಮಿ ಭಾರತದಲ್ಲಿ..ನೀವೇ
ಭವ್ಯಭಾರತದ ಆಶಾಕಿರಣ
ತಾಯಿ ಭಾರತಿಯ ಮಡಿಲಮಕ್ಕಳು ನೀವು

ನಮ್ಮ ನಾಡು-ನುಡಿ ಗೌರವಿಸಿ
ಸಂಸ್ಕೃತಿಯನ್ನು ಪ್ರತಿಬಿಂಬಿಸಿ ಎಂದೆನುತೆ
ಎಚ್ಚರಿಸಿದಿರಿ ಯುವಜನತೆಯ
ಆಹಾ...ನಿಮ್ಮ ಮಾತಕೇಳುತ್ತ
ಮಂತ್ರಮುಗ್ಧರಾದರವರು

ಸಾಹಿತ್ಯ ಸಂಗೀತ ನೃತ್ಯ ಆಧ್ಯಾತ್ಮದ ರಸದೌತಣ
ಮೈಪುಳಕಗೊಳ್ಳುವ ಕಣ್ತುಂಬಿ ಬರುವ
ಸಮಯವದು ನೂರಾರು ಸಾವಿರಾರು

ಕಂಠದಿಂ ಏಕತಾನದೆ ಹೊಮ್ಮುವ
ದೇಶಪ್ರೇಮ ಸಾರುವ
"ವಂದೇ ಮಾತರಂ"

ಜನತೆ ಕಾಣಲಸದಳವಾದ
ತೇಜಸ್ ಕ್ಷಿಪಣಿ, ಮಂಗಳಯಾನ
ಯುದ್ಧೋಪಕರಣ ತಂದಿರಿಸಿದಿರಿ
ಕಣ್ಣಳತೆಯಲಿ ಕಾಣುವ ಭಾಗ್ಯವೆಮಗೆ
ಹೆಮ್ಮೆಯ ವಿಜ್ಞಾನಿಗಳ
ನೋಡುವ ಮಾತಾಡುವ ಭಾಗ್ಯ

ಸೋದರ...ಪ್ರತಿವರುಷ ಒಂದೊಂದು ಸಂಕಲ್ಪ
ಹಸಿರು...ಉಸಿರು ನಿಮ್ಮ
ಭವ್ಯ ಭಾರತದ ಕನಸಿನಲ್ಲೊಂದು
ನೀವಿಟ್ಟ ಹೆಜ್ಜೆಯಲಿ ನಡೆಯುತ್ತಿರುವುದು
ಆ ನಿಮ್ಮ ಕನಸು ನನಸಾಗಿ
ಪ್ರತಿ ರವಿವಾರ ಹಸಿರು ಉಸಿರಾಗಿ
ನಿಮ್ಮಾಸೆಯಂತೆ

ಸಪ್ತಪದಿ ತುಳಿದು ನಿಮ್ಮ ಕೈ ಹಿಡಿದವಳ
ಧೀಮಂತಶಕ್ತಿ, ಪರಿಶ್ರಮ, ಸಂಕಲ್ಪ

ಎಮಗೆ ಸ್ಫೂರ್ತಿ ನಳನಳಿಸುತ್ತಿದೆ
ನೆಟ್ಟ ಗಿಡ-ಬಳ್ಳಿ ಹಸುರಾಗಿ, ಕಾಣುವೆವು
ನಾವು ಎಲೆ-ಎಲೆಯಲ್ಲಿ ನಿಮ್ಮ ಬಿಂಬ

ಸೋದರ... ವರ್ಷದ ಕೊನೆಯ ದಿನ
ಮಧ್ಯರಾತ್ರಿ, ಹೊಸವರ್ಷಕ್ಕೆ ಸ್ವಾಗತ
ಕೋರುತ್ತಾ....ನೀವು ಬೋಧಿಸುವ
ವರ್ಷದ ಸಂಕಲ್ಪ, ಮಂತ್ರಮುಗ್ಧಕ್ಷಣ
ನೆರೆದ ಜನತೆಯ ಮಧ್ಯದಲ್ಲಿ, ಸಿಹಿ
ಹಿಡಿದು ನಗುಮುಖದಿಂ
ಶುಭಕೋರುತ್ತಾ ನಡೆದು ಬರಬೇಕಲ್ಲವೇ...ನೀವು
ಹೊರಟಿರೇಕೆ ತರಾತುರಿಯಲ್ಲಿ, ನಮ್ಮನಗಲಿ?

ಅನಂತಕುಮಾರ ಸೋದರಾ...
ನಾವಿಂದು ಹಾಡುತ್ತಿರುವೆವು
ನಿಮಗಾಗಿ, ನಿಮಗಿಷ್ಟವಾದ ಭಾವಗೀತೆ
ರಾಷ್ಟ್ರಕವಿಯ "ಓ..ನನ್ನ ಚೇತನ"
ಅನಂತ, ತಾನನಂತವಾಗಿ ಆಗುತಿಹನೆ ನಿತ್ಯಯೋಗಿ
ಅನಂತ ನೀ ಅನಂತವಾಗಿ

**- ಲೀಲಾ ಬಸವರಾಜು**
ಬೆಂಗಳೂರು

# ಜಿ ಎಸ್ ಟಿ (ಸರಕು ಮತ್ತು ಸೇವಾ ತೆರಿಗೆ) ಮತ್ತು ಅನಂತಕುಮಾರ್



ಜಿ.ಎಸ್. ಟಿ. ವಿಧೇಯಕದ ಅಂಗೀಕಾರಕ್ಕಾಗಿ ೨೦೧೬ ಆಗಸ್ಟ್ ತಿಂಗಳಲ್ಲಿ ತಡರಾತ್ರಿ ಸೇರಿದ ಸಂಸದ್ ಅಧಿವೇಶನಕ್ಕೆ ಸಂಸದೀಯ ವ್ಯವಹಾರಗಳ ಸಚಿವ ಶ್ರೀ ಅನಂತಕುಮಾರ್, ಆಗಿನ ರಾಷ್ಟ್ರಪತಿ ಶ್ರೀ ಪ್ರಣಬ್ ಮುಖರ್ಜಿಯವರನ್ನು ಕರೆತರುತ್ತಿರುವುದು

ಆಗಸ್ಟ್ 2016 ಮುಂಗಾರು ಅಧಿವೇಶನದಲ್ಲಿ ಭಾರತದ ಸಂಸತ್ತು ಜಿಎಸ್ಟಿ (ಸರಕು ಮತ್ತು ಸೇವಾ ತೆರಿಗೆ) ಸುಧಾರಣೆಗಾಗಿ ಐತಿಹಾಸಿಕ ವಿಧೇಯಕವನ್ನು ಅಂಗೀಕರಿಸಿತು. ತೆರಿಗೆಗಳ ಕ್ಷೇತ್ರದಲ್ಲಿ ಶತಮಾನದ ಸುಧಾರಣೆಯೆಂದೇ ಭಾವಿಸುವ ಜಿಎಸ್ಟಿ ವಿಧೇಯಕವು ಭಾರತದ ಆರ್ಥಿಕತೆಯ ಚಿತ್ರಣವನ್ನು ಬದಲಿಸುವುದರ ಜೊತೆಗೆ ಹೆಚ್ಚು ಸ್ಪರ್ಧಾತ್ಮಕವೂ ಆಗಿದೆ. ಜಿಎಸ್ಟಿ ವಿಧೇಯಕವು ಭಾರತದ ಸಂಸದೀಯ ಇತಿಹಾಸದಲ್ಲಿಯೇ ಅತ್ಯಂತ ಸುದೀರ್ಘಕಾಲ ಸಂಸತ್ತಿನಲ್ಲಿ ಅಂಗೀಕಾರವಾಗದೆ ಉಳಿದಿರುವ ಒಂದು ಮಸೂದೆಯಾಗಿತ್ತು. ಅದುವರೆಗೆ ಜಿಎಸ್ಟಿಗಾಗಿ ಒಮ್ಮತ ಮೂಡಿಸುವುದೇ ಕಷ್ಟವಾಗಿತ್ತು. 17 ವರ್ಷಗಳ ಹಿಂದೆ ಅಂದರೆ 1999ರಲ್ಲಿ ಅಂದಿನ ಪ್ರಧಾನಮಂತ್ರಿಗಳಾಗಿದ್ದ ಶ್ರೀ ಅಟಲ್ ಬಿಹಾರಿ ವಾಜಪೇಯಿ ಮತ್ತು ಹಿಂದಿನ ಮೂವರು ರಿಸರ್ವ್ ಬ್ಯಾಂಕ್ ಗವರ್ನರ್ ಗಳಾಗಿದ್ದ ಸರ್ವಶ್ರೀ ಐ.ಜಿ. ಪಟೇಲ್, ಬಿಮಲ್ ಜಲಾನ್ ಮತ್ತು ಸಿ. ರಂಗರಾಜನ್ ಅವರನ್ನೊಳಗೊಂಡ ಆರ್ಥಿಕ ಸಲಹಾ ಸಮಿತಿಯ ಒಂದು ಸಭೆಯಲ್ಲಿ ಮೊತ್ತ ಮೊದಲ ಬಾರಿಗೆ ಜಿಎಸ್ಟಿಯ ಪರಿಕಲ್ಪನೆ ಹುಟ್ಟಿಕೊಂಡಿದ್ದರೂ 17 ವರ್ಷಗಳ ನೆನೆಗುದಿಯ ಮತ್ತು ರಾಜಕೀಯ ಪಲ್ಲಟಗಳ ನಂತರ ಕೊನೆಗೂ 2016ರಲ್ಲಿ ಜಿಎಸ್ಟಿ ವಿಧೇಯಕ ಅಂಗೀಕಾರವಾಯಿತು. ಎನ್ ಡಿ ಎ ಸರ್ಕಾರದ ಅವಧಿಯಲ್ಲಿ ಜಿಎಸ್ಟಿ ವಿಧೇಯಕದ ಜಾರಿಗೆ ವೇಗ ದೊರೆಯಿತು. ಅಂದಿನ ಹಣಕಾಸು ಮಂತ್ರಿಗಳಾಗಿದ್ದ ಶ್ರೀ ಅರುಣ್ ಜೇಟ್ಲಿಯವರು ನಾಲ್ಕು ಜಿಎಸ್ಟಿ ವಿಧೇಯಕಗಳನ್ನು ಮಂಡಿಸಿದರು.

ಈ ಮಸೂದೆಯ ಅಂಗೀಕಾರದ ಹಿಂದೆ ಆಗ ಕೇಂದ್ರ ಸಂಸದೀಯ ವ್ಯವಹಾರ ಹಾಗೂ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರಾಗಿದ್ದ ಶ್ರೀ ಅನಂತಕುಮಾರ್ ಅವರ ಕಠಿಣ ಪರಿಶ್ರಮವಿತ್ತು. ಜಿಎಸ್ಟಿ ಮಸೂದೆಯನ್ನು ಜಾರಿಗೆ ಸಂವಿಧಾನ (ತಿದ್ದುಪಡಿ) ವಿಧೇಯಕವನ್ನು ಸಂಸತ್ತಿನಲ್ಲಿ ಲೋಕಸಭೆ ಹಾಗೂ ರಾಜ್ಯಸಭೆ ಎರಡರಲ್ಲೂ 2/3 ರಷ್ಟು ಬಹುಮತದೊಂದಿಗೆ ಹಾಗೂ 50 ಪ್ರತಿಶತ ರಾಜ್ಯ ವಿಧಾನಸಭೆಗಳು ಅಂಗೀಕರಿಸಬೇಕಾಗಿತ್ತು. ಅಂದಿನ ಸರಕಾರಕ್ಕೆ ಲೋಕಸಭೆಯಲ್ಲೇನೋ ಬಹುಮತ ಇತ್ತು. ಆದರೆ ರಾಜ್ಯಸಭೆಯಲ್ಲಿ ಕೇವಲ ಸಾಮಾನ್ಯ ಬಹುಮತ ಮಾತ್ರ ಇತ್ತು. ಆಗ ಸಂಸದೀಯ ವ್ಯವಹಾರಗಳ ಮಂತ್ರಿಗಳಾಗಿದ್ದ ಶ್ರೀ ಅನಂತ ಕುಮಾರ್ ಈಗಾಗಲೇ 17 ವರ್ಷಗಳು ಕಳೆದು ಹೋಗಿವೆ, ಈಗಲಾದರೂ ಈ ವಿಧೇಯಕವನ್ನು ಜಾರಿಗೆ ತರಲೇಬೇಕು ಎಂದು ಪಣ ತೊಟ್ಟರು.

ಸಾಮಾನ್ಯವಾಗಿ ಆಡಳಿತ ಪಕ್ಷದವರು ವಿರೋಧ ಪಕ್ಷದವರ ಬಳಿ ಹೋಗಿ ಕೇಳಿಕೊಳ್ಳುವುದು ಬಹಳ ವಿರಳ. ಆದರೆ ಶ್ರೀ ಅನಂತ ಕುಮಾರ್ ತಮ್ಮ ರಾಜಕೀಯ ಪರಿಣತಿ ಮತ್ತು ಮುತ್ಸದ್ದಿತನವನ್ನು ಉಪಯೋಗಿಸಿ, ಹಣಕಾಸು ಸಚಿವರಾದ ಅರುಣ್ ಜೇಟ್ಲಿಯವರನ್ನು ಹುರಿದುಂಬಿಸಿ ಜಿಎಸ್ಟಿ ಮಸೂದೆಯ ಮೇಲಿನ ಬಿಕ್ಕಟ್ಟನ್ನು ಪರಿಹರಿಸಲು ಹೊಸ ಪ್ರಸ್ತಾವನೆಗಳೊಂದಿಗೆ ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಲು ತಯಾರಿ ನಡೆಸಿದರು. ಕಾಂಗ್ರೆಸ್ ಪಕ್ಷವು ಸಂವಿಧಾನ ತಿದ್ದುಪಡಿಯ ವಿಧೇಯಕದಲ್ಲೇ ಜಿಎಸ್ಟಿ ದರವನ್ನು ನಿರ್ಣಯಿಸಲು ಒತ್ತಾಯಿಸುತ್ತಿದ್ದುದರಿಂದ ಸರ್ಕಾರ ಜಿಎಸ್ಟಿ ಮಸೂದೆಯಲ್ಲಿ ಜಿಎಸ್ಟಿ ದರದ ಉಪ-ನಿಯಮಗಳನ್ನು ಸೇರಿಸುವುದೋ ಅಥವಾ ಮುಖ್ಯ ಸಂವಿಧಾನ ತಿದ್ದುಪಡಿಯ ವಿಧೇಯಕದ ನಂತರ ಬರುವ ಕೇಂದ್ರ ಜಿಎಸ್ಟಿ ವಿಧೇಯಕದಲ್ಲಿ ದರ ನಿರ್ಣಯದ ನಿಬಂಧನೆಯನ್ನು ಸೇರಿಸುವುದೋ ಎಂಬ ಎರಡು ಪರ್ಯಾಯ ಸಲಹೆಗಳೊಂದಿಗೆ ವಿರೋಧಪಕ್ಷದ ನಾಯಕರನ್ನು ಭೇಟಿ ಮಾಡಿತು.

ಅದರಂತೆಯೇ, ಜಿಎಸ್ಟಿ ಮಸೂದೆಯ ಮೇಲಿನ ಬಿಕ್ಕಟ್ಟನ್ನು ಪರಿಹರಿಸಲು, ಕೇಂದ್ರ ಸಚಿವರುಗಳಾದ ಅರುಣ್ ಜೇಟ್ಲಿ ಮತ್ತು ಅನಂತ ಕುಮಾರ್ ಎಲ್ಲ ಪಕ್ಷಗಳ ನಡುವೆ ಒಮ್ಮತವನ್ನು ಮೂಡಿಸಲು ಕಾಂಗ್ರೆಸ್ಸಿನ ಹಿರಿಯ ನಾಯಕರಾದ ಗುಲಾಂ ನಬಿ ಆಜಾದ್ ಮತ್ತು ಆನಂದ ಶರ್ಮ ಅವರನ್ನು ಭೇಟಿ ಮಾಡಿದರು. ಭೇಟಿಯ ನಂತರ ಸಚಿವರು, "ನಾವು ಜಿಎಸ್ಟಿಯ ಬಗ್ಗೆ ಒಮ್ಮತವನ್ನು ಮೂಡಿಸಲು ಪ್ರಯತ್ನಿಸುತ್ತಿದ್ದೇವೆ. ನಾವು ಎಲ್ಲ ಅಂಶಗಳನ್ನೂ ಚರ್ಚಿಸಿದ್ದೇವೆ. ಮುಂಗಾರು ಅಧಿವೇಶನ ಶುರುವಾದ ಕೂಡಲೇ, ನಮ್ಮ ನಮ್ಮ ಪಕ್ಷಗಳ ನಡುವೆ ಚರ್ಚಿಸಿ ನಂತರ ನಾವೆಲ್ಲರೂ ಮತ್ತೊಮ್ಮೆ ಭೇಟಿ ಮಾಡುತ್ತೇವೆ" ಎಂದು ಹೇಳಿದರು.

ಸನ್ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರಮೋದಿಯವರ ಸ್ಫೂರ್ತಿದಾಯಕ ನಾಯಕತ್ವ, ಹಣಕಾಸು ಸಚಿವ ಶ್ರೀ ಅರುಣ್ ಜೇಟ್ಲಿಯವರ ಪರಿಶ್ರಮ, ಶ್ರೀ ವೆಂಕಯ್ಯ ನಾಯ್ಡು ಅವರ ಕೊಡುಗೆ, ರಾಜ್ಯ ಸಚಿವರಾದ ಶ್ರಿ ಎಸ್ ಎಸ್ ಅಹ್ಲುವಾಲಿಯಾ ಮತ್ತು ಶ್ರೀ ಮುಕ್ತಾರ್ ಅಬ್ಬಾಸ್ ನಖ್ವಿಯವರ ಸಹಕಾರ ಮತ್ತು ಮುಖ್ಯ ಸಚೇತಕರಾಗಿದ್ದ ಶ್ರೀ ರಾಕೇಶ್ ಕುಮಾರ್ ಮತ್ತು ಶ್ರೀ ರಾಮನಾರಾಯಣ ಡೂಡಿ ಅವರ ಸಹಾಯಗಳ ಜೊತೆಗೆ ಶ್ರೀ ಅನಂತಕುಮಾರ್ ಅವರ ಕಠಿಣ ಪರಿಶ್ರಮದ ಫಲವಾಗಿ 2016ರ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಐತಿಹಾಸಿಕವಾದ ಈ ಮಸೂದೆಯನ್ನು ಸರ್ವಸಮ್ಮತಿಯಿಂದ ಎರಡೂ ಸದನಗಳಲ್ಲಿ ಅಂಗೀಕರಿಸಲಾಯಿತು.

ಸಂಸತ್ತಿನಲ್ಲಿ ಯಾವುದೇ ಸಂವಿಧಾನ ತಿದ್ದುಪಡಿ ಮಸೂದೆ ಅಂಗೀಕರಿಸಲು ಮೂರನೇ ಎರಡರಷ್ಟು ಬಹುಮತ ಅಗತ್ಯವಿದ್ದ ಸಂದರ್ಭದಲ್ಲಿ ಜಿಎಸ್ಟಿ ಮಸೂದೆ ಲೋಕಸಭೆ ಮತ್ತು ರಾಜ್ಯಸಭೆ ಎರಡರಲ್ಲೂ ಸರ್ವಾನುಮತದಿಂದ ಅಂಗೀಕೃತಗೊಂಡಿತು. ಮಸೂದೆಗಳ ಅಂಗೀಕಾರಕ್ಕೆ ಇಂತಹ ಒಮ್ಮತ ಸಿಗುವುದು ಅತ್ಯಂತ ವಿರಳ.

ಜಿಎಸ್ಟಿ ಬಗ್ಗೆ ಅನಂತಕುಮಾರ್ ಅವರು ಇದು ಹೆಚ್ಚಿನ ಪಾರದರ್ಶಕತೆ ಹೊಂದಿದ್ದು, ತೆರಿಗೆಯ ಮೂಲವನ್ನು ಹೆಚ್ಚಿಸುತ್ತದೆ ಮತ್ತು ಸ್ವಯಂಪ್ರೇರಿತ ಚಾಲನೆಯನ್ನು ವೃದ್ಧಿಸುತ್ತದೆ ಹಾಗೂ ಆದಾಯ ಸಂಗ್ರಹವೂ ಹೆಚ್ಚಾಗುತ್ತದೆ ಎಂದು ವಿವರಿಸಿದರು. ಇಡೀ ರಾಷ್ಟ್ರವೇ ಒಂದು ಮಾರುಕಟ್ಟೆಯಾಗಲಿದ್ದು ವ್ಯವಹಾರ ಕೂಡ ಬಲು ಸುಲಭವಾಗುತ್ತದೆ. 17 ಪರೋಕ್ಷ ತೆರಿಗೆಗಳಿಗೆ ಬದಲಿಯಾಗಿ ಜಾರಿಗೆ ಬಂದಿರುವ ಈ ಮಸೂದೆಯಿಂದ ವ್ಯವಹಾರ ಸುಗಮಗೊಳ್ಳುತ್ತದೆ. ಇದರಿಂದ ವ್ಯವಹಾರದಲ್ಲಿ ಕಾನೂನಾತ್ಮಕ ವೆಚ್ಚ ಕೂಡ ಕಡಿಮೆಯಾಗುತ್ತದೆ ಎಂದೂ ಹೇಳಿದರು.

ಅನಂತಕುಮಾರ್ ಅವರು 3 ವಾರಗಳ ಅಲ್ಪಾವಧಿಯಲ್ಲಿ 17 ರಾಜ್ಯಗಳು ಜಿಎಸ್ಟಿಯನ್ನು ಒಪ್ಪಿ ಅಂಗೀಕರಿಸಿದ್ದು ಸಹಕಾರಿ ಒಕ್ಕೂಟ ವ್ಯವಸ್ಥೆಗೆ ಒಂದು ಉತ್ತಮ ಉದಾಹರಣೆಯಾಗಿದೆ ಎಂದು ಹೇಳಿದರು. ಇದೇ ಸಮಯದಲ್ಲಿ ಪ್ರಧಾನಿ, "ಇದು ಒಂದು ಪಕ್ಷ ಅಥವಾ ಸರ್ಕಾರದ ಗೆಲುವಾಗಿರದೆ ಭಾರತದ ಪ್ರಜಾಪ್ರಭುತ್ವ ತತ್ವಗಳ ಗೆಲುವಾಗಿದೆ" ಎಂದು ಹೇಳಿದರು. ಹಣಕಾಸು ಸಚಿವ ಶ್ರೀ ಅರುಣ್ ಜೇಟ್ಲಿ, "ಜಿಎಸ್ಟಿ ಮಸೂದೆ ರಾಜ್ಯಗಳನ್ನು ಸಶಕ್ತಗೊಳಿಸುವುದರ ಜೊತೆಗೆ ಕೇಂದ್ರ ಮತ್ತು ರಾಜ್ಯಗಳ ಆದಾಯವನ್ನು ಹೆಚ್ಚಿಸುತ್ತದೆ, ತೆರಿಗೆ ಮೇಲಿನ ಮೇಲ್ತೆರಿಗೆಯಿಲ್ಲದಂತೆ ಖಾತ್ರಿಪಡಿಸುತ್ತದೆ" ಎಂದು ಹೇಳಿದರು.

ಜಿಎಸ್ಟಿಯ ಬಗ್ಗೆ ಯಾವುದೇ ಸೂಚನೆ, ಬದಲಾವಣೆ ಮಾಡಬೇಕಾದರೆ ಅದನ್ನು ಜಿಎಸ್ಟಿ ಸಮಿತಿಯ ಮುಂದೆ ಮಂಡಿಸಿ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆಯೆನ್ನುವುದು ಜಿಎಸ್ಟಿಯ ವಿಶೇಷತೆ. ಕೇಂದ್ರ ಹಣಕಾಸು ಸಚಿವರೂ ಸೇರಿದಂತೆ ಯಾರೊಬ್ಬರಿಗೂ ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳುವ ಅವಕಾಶವಿಲ್ಲ. ಹಾಗಾಗಿ ಇದು ಹೆಚ್ಚು ಪಾರದರ್ಶಕವಾಗಿದೆ.

**ಸಂಗ್ರಹ: ಹೆಚ್. ಆರ್. ಪ್ರಕಾಶ್**

# ಆರೋಗ್ಯ ಕ್ರಾಂತಿ – ಜನೌಷಧಿ ಯೋಜನೆ

ಪುಟ 1 ರಿಂದ ಕೇಂದ್ರಗಳು ಹಾಗೂ ಹೀಗೂ ಜೀವ ಉಳಿಸಿಕೊಂಡಿದ್ದವು. ಈ ಕೇಂದ್ರಗಳಿಗೆ ಔಷಧಗಳ ಪೂರೈಕೆ ವ್ಯವಸ್ಥೆಯೇ ಕುಂಠಿತವಾಗಿತ್ತು. ಸೂಕ್ಷ್ಮವಾಗಿ ಅವಲೋಕಿಸಿದರೆ ಅಂದಿನ ಸರಕಾರದ ಇಚ್ಛಾಶಕ್ತಿಯ ಕೊರತೆ, ಜನ ಪ್ರತಿನಿಧಿಗಳ ನಿರಾಸಕ್ತಿ ಮತ್ತು ಔಷಧ ತಯಾರಿಕೆ ಕಂಪೆನಿಗಳ ಲಾಬಿ ಈ ದುಸ್ಥಿತಿಗೆ ಕಾರಣವಾಗಿತ್ತು ಎಂದು ತಿಳಿದು ಬರುತ್ತದೆ.




**ಅನಂತ ಪ್ರವೇಶ**

ದೇಶದ ಆಡಳಿತ ವ್ಯವಸ್ಥೆಯೇ ಕುಸಿಯತೊಡಗಿ, ಜನರು ಹತಾಶರಾಗಿ ಬದಲಾವಣೆಯನ್ನು ಬಯಸುತ್ತಿದ್ದ ಸಂದರ್ಭದಲ್ಲಿಬದಲಾವಣೆಯ ಹೊಸ ಗಾಳಿಯ ಭರವಸೆಯೊಂದಿಗೆ 2014ರ ಮೇ 26 ರಂದು ಶ್ರೀ ನರೇಂದ್ರ ಮೋದಿಯವರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದರು. ಅವರ ಜೊತೆಗೆ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಪ್ರತಿನಿಧಿಯಾಗಿದ್ದ ಶ್ರೀ ಅನಂತಕುಮಾರರು ರಾಸಾಯನಿಕ ಮತ್ತು ರಸಗೊಬ್ಬರ ಖಾತೆಗಳ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಆ ಕಾಲದಲ್ಲಿ ಸಮಸ್ಯೆಗಳ ಗೂಡಾಗಿದ್ದ ಆ ಖಾತೆಯನ್ನು ನಿರ್ವಹಿಸಲು ಘಟಾನುಘಟಿಗಳೇ ಹಿಂದೇಟು ಹಾಕುತ್ತಿದ್ದರು. ದೇಶದೆಲ್ಲೆಡೆ ರಸಗೊಬ್ಬರದ ಕೊರತೆಯಿಂದಾಗಿ ರೈತರ ದಂಗೆಗಳು ಸಾಮಾನ್ಯವಾಗಿದ್ದವು. ಔಷಧಗಳ ಬೆಲೆ ನಿಯಂತ್ರಣಕ್ಕೆ ಸಿಕ್ಕದೆ ಗಗನಕ್ಕೇರುತ್ತಿತ್ತು. ಜನಸಾಮಾನ್ಯರಿಗೆ ಆರೋಗ್ಯವೇ ದೊಡ್ಡ ಹೊರೆಯಾದ ಕಾಲವದು. ಆದರೆ ಅನಂತಕುಮಾರರು ಸಮಸ್ಯೆಗಳನ್ನು ಸವಾಲಾಗಿ ಸ್ವೀಕರಿಸಿದರು.

ಅನಂತಕುಮಾರರ ಜೀವನವನ್ನು ಹತ್ತಿರದಿಂದ ಗಮನಿಸಿದವರಿಗೆ ಅವರು ಜನಸಾಮಾನ್ಯರ "ಅನ್ನ, ಅಕ್ಷರ ಮತ್ತು ಆರೋಗ್ಯ" ಗಳ ಬಗ್ಗೆ ಅತೀವ ಕಾಳಜಿ ಹೊಂದಿರುವುದು ತಿಳಿಯುತ್ತದೆ. ರಸಗೊಬ್ಬರ ಕೊರತೆಯ ಬೇರುಗಳನ್ನು ಶೋಧಿಸಿದ ಅವರು ಬೇವು ಲೇಪಿತ ಯೂರಿಯಾ ಕಲ್ಪನೆಯೊಂದಿಗೆ ರೈತರ ಸಮಸ್ಯೆಗಳಿಗೆ ಸ್ಪಂದಿಸಿ ಯಶಸ್ವಿಯಾದರು. ಈಗ ಜನರ ಆರೋಗ್ಯದ ಬಗ್ಗೆ ಗಮನ ಹರಿಸಬೇಕಾಗಿತ್ತು. ಸ್ವಚ್ಛ ಭಾರತ ಅಭಿಯಾನಕ್ಕೆ ಅದಾಗಲೇ ಪ್ರಧಾನ ಮಂತ್ರಿಗಳು ಚಾಲನೆ ಕೊಟ್ಟಿದ್ದರು.



ತಮ್ಮ ಖಾತೆಯ ಅಡಿಯಲ್ಲಿ ಬರುವ ಭಾರತದ ಸಾರ್ವಜನಿಕ ವಲಯದ ಔಷಧ ತಯಾರಿಕೆ ಕಂಪೆನಿಗಳ ಬ್ಯೂರೋ (BPPI) ಸಂಸ್ಥೆಯ ಕಾರ್ಯವೈಖರಿಯನ್ನು ಪರಿಶೀಲಿಸುವಾಗ ನೆನೆಗುದಿಯಲ್ಲಿದ್ದ ಪ್ರಧಾನಮಂತ್ರಿ ಭಾರತೀಯ ಜನೌಷಧಿ ಪರಿಯೋಜನೆ (PMBJP) ಅವರ ಗಮನಕ್ಕೆ ಬಂದಿತು. ತತ್ಕ್ಷಣ

ಪುಟ 8 ರಲ್ಲಿ ಮುಂದುವರೆದಿದೆ

## ಜೆನೆರಿಕ್ಔಷಧಿಗಳ ಗುಣಮಟ್ಟವನ್ನು ನಂಬಬಹುದೆ?

ಖಂಡಿತವಾಗಿ ನಂಬಬಹುದು. ಜನೌಷಧಿ ಕೆಂದ್ರಗಳಲ್ಲಿ ದೊರೆಯುವ ಎಲ್ಲ ಉತ್ಪನ್ನಗಳೂ ಸಂಬಂಧಿತ ಅಂಗೀಕಾರ ಮಂಡಳಿಯ (N A B L ) ಕಠಿಣವಾದ ಪರೀಕ್ಷೆಯನ್ನು ಎದುರಿಸಿರುತ್ತವೆ ಹಾಗೂ ಅವುಗಳನ್ನು ವಿಶ್ವ ಆರೋಗ್ಯ ಸಂಸ್ಥೆಯ ನಿರ್ದೇಶನಗಳನ್ನು ಪಾಲಿಸುವ ಸಂಸ್ಥೆಗಳೇ ತಯಾರಿಸುತ್ತವೆ. ಮಳಿಗೆಗಳನ್ನು ನಡೆಸುವವರೂ ಸೂಕ್ತ ಅರ್ಹತೆಯನ್ನು ಹೊಂದಿರುತ್ತಾರೆ

## ಉತ್ಪನ್ನಗಳ ಪಟ್ಟಿ

ಇಂದು **1038** ಔಷಧ ಉತ್ಪನ್ನಗಳು ಹಾಗೂ **127** ಶಸ್ತ್ರಚಿಕಿತ್ಸೆಗೆ ಬಳಸುವ ವಸ್ತುಗಳು ಜನೌಷಧಿ ಬುಟ್ಟಿಯಲ್ಲಿವೆ. ಈ ಪಟ್ಟಿಯನ್ನು janaushadhi.gov.in ಜಾಲತಾಣದಲ್ಲಿ ಪಡೆಯಬಹುದು.

## ಹೊಸ ಜನೌಷಧಿ ಮಳಿಗೆಗಳ ಸ್ಥಾಪನೆ

ಜನೌಷಧಿ ಕೇಂದ್ರಗಳನ್ನು ಸ್ಥಾಪಿಸಲು ಮಾರ್ಗಸೂಚಿಗಳನ್ನು janaushadhi.gov.in ಜಾಲತಾಣದಲ್ಲಿ ನೀಡಲಾಗಿದೆ.
ಜನೌಷಧಿ ಯೋಜನೆಯನ್ನು ತ್ವರಿತವಾಗಿ ವಿಸ್ತರಿಸಲು ಈ ಕೇಂದ್ರಗಳ ಪ್ರೋತ್ಸಾಹಧನವನ್ನು 2 . 5 ಲಕ್ಷ ರೂಪಾಯಿಗಳಿಂದ 5 ಲಕ್ಷ ರೂಪಾಯಿಗಳಿಗೆ ಏರಿಸಲಾಗಿದೆ. ಇದಲ್ಲದೆ, ದಲಿತರಿಗೆ, ಆದಿವಾಸಿಗಳಿಗೆ, ಮಹಿಳೆಯರಿಗೆ ಮತ್ತು ಈಶಾನ್ಯ ಭಾರತದ ಜನತೆಗೆ 2 ಲಕ್ಷ ರೂಪಾಯಿಗಳ ಪ್ರೋತ್ಸಾಹಧನವನ್ನು ಹೆಚ್ಚುವರಿಯಾಗಿ ನೀಡಲಾಗುತ್ತದೆ. ಈ ಹಣವನ್ನು ಅವರು ಅಂಗಡಿ ಮಳಿಗೆಗಳಿಗೆ ಮತ್ತು ಅವಶ್ಯ ಪೀಠೋಪಕರಣ ಇತ್ಯಾದಿಗಳಿಗೆ ಬಳಸಿಕೊಳ್ಳಬಹುದಾಗಿದೆ.

## ಬ್ರಾಂಡೆಡ್ ಮತ್ತು ಜೆನೆರಿಕ್ಔಷಧಿಗಳ ದರದಲ್ಲಿ ವ್ಯತ್ಯಾಸವೇಕೆ?

ಹೊಸ ಔಷಧಗಳನ್ನು ಸಂಶೋಧನೆ ಮಾಡುವಾಗ ಔಷಧ ಕಂಪೆನಿಗಳು ಅಪಾರ ಪ್ರಮಾಣದ ಬಂಡವಾಳವನ್ನು ಹೂಡಿರುತ್ತವೆ. ಹೊಸ ಔಷಧಿಗಳಿಗಾಗಿ ಆಹಾರ ಮತ್ತು ಔಷಧ ಪ್ರಾಧಿಕಾರವು ಪೇಟೆಂಟ್ನೀಡುತ್ತವೆ. ಈ ಪೇಟೆಂಟ್ ಅವಧಿಯಲ್ಲಿ ಬೇರೆ ಕಂಪೆನಿಗಳು ಅದೇ ಔಷಧವನ್ನು ತಯಾರಿಸುವುದನ್ನು ನಿಷೇಧಿಲಾಗಿರುತ್ತದೆ. ತಾನು ಹೂಡಿದ ಬಂಡವಾಳವನ್ನು ಲಾಭ ಸಮೇತ ಪಡೆದುಕೊಳ್ಳುವ ಸಲುವಾಗಿ ಪೇಟೆಂಟ್ಅವಧಿಯಲ್ಲಿ ಕಂಪೆನಿಯು ಅತ್ಯಧಿಕ ಬೆಲೆಯಲ್ಲಿ ಉತ್ಪನ್ನಗಳನ್ನು ಮಾರುತ್ತದೆ. ಆದರೆ ಪೇಟೆಂಟ್ ಅವಧಿ ಮುಗಿದ ನಂತರ ಯಾರು ಬೇಕಾದರೂ ಅದೇ ಔಷಧದ ರಾಸಾಯನಿಕಗಳ ಸಂಯುಕ್ತಗಳನ್ನು ಹೊಂದಿರುವ ಔಷಧಗಳನ್ನು ತಯಾರಿಸಬಹುದು. ಸಂಶೋಧನೆಯ ವೆಚ್ಚವಿಲ್ಲದ ಹಾಗೂ ಮಾರುಕಟ್ಟೆ ಪೈಪೋಟಿಯಿಂದಾಗಿ ಜೆನೆರಿಕ್ ಔಷಧಗಳು ಅತ್ಯಂತ ಕಡಿಮೆ ಬೆಲೆಯಲ್ಲಿ ದೊರೆಯುತ್ತವೆ.

## ಬೆಲೆಗಳಲ್ಲಿ ಅಂತರ

ಅನೇಕ ಜೀವರಕ್ಷಕ ಔಷಧಿಗಳು ಬ್ರಾಂಡೆಡ್ ಕಂಪೆನಿಗಳ ಉತ್ಪನ್ನಗಳಿಗಿಂತ ಶೇ.90ರಷ್ಟು ಕಡಿಮೆ ಬೆಲೆಯಲ್ಲಿ ದೊರೆಯುತ್ತವೆ. ಕೆಳಗಿನ ಪಟ್ಟಿಯನ್ನು ಪರಿಶೀಲಿಸಿ. (ಇಲ್ಲಿ ನಮೂದಿಸಿದ ಬೆಲೆಗಳು ನಿಖರವೆಂದು ಭಾವಿಸಬೇಕಿಲ್ಲ). ಇದು ಕೇವಲ ಪ್ರಾತಿನಿಧಿಕ ಪಟ್ಟಿ.

| ಖಾಯಿಲೆ/ಔಷಧ | ಬ್ರಾಂಡೆಡ್ ಔಷಧಿ | ಜನೌಷಧಿ |
|---|---|---|
| ಜ್ವರ/ಪಾರಾಸೆಟಮಾಲ್ | 30.00 | 5.00 |
| ಬಿಪಿ/Tsart Trio | 152.00 | 25.00 |
| ಬಿಪಿ/ಮಿನಿಪ್ರೆಸ್XL 5 mg | 520.00 | 30.00 |
| ಬೇಬಿ ಡಯಪರ್ | 14.00 | 6.00 |
| ಗ್ಲೂಕೋಮೀಟರ್ ಪಟ್ಟಿ | 20.00 | 9.00 |
| ಸ್ಯಾನಿಟರಿ ನ್ಯಾಪ್ಕಿನ್ | 13.00 | 2.00 |
| ಅಜಿತ್ರೊಮೈಸಿನ್ (ಆಂಟಿಬಯೋಟಿಕ್) | 20.00 | 1.36 |

# ಅನಂತ ಯಶಸ್ಸಿನ ಆಪ್ತ ಯೋಜನೆ



ಜನೌಷಧಿ ಯೋಜನೆಯು ಅನಂತ ಕುಮಾರರಿಗೆ ಅತ್ಯಾಪ್ತವಾಗಿತ್ತು. ಜನೌಷಧಿ ಎಂಬ ಹೆಸರನ್ನು ಸೂಚಿಸಿದವರೂ ಅವರೇ. ಜೊತೆಗೆ ಹೆಚ್ಚು ಹೆಚ್ಚು ಮಳಿಗೆಗಳ ಸ್ಥಾಪನೆಗೆ ಒತ್ತು ನೀಡುವ ದಿಸೆಯಲ್ಲಿ 2.5 ಲಕ್ಷ ರೂಪಾಯಿಗಳ ಅನುದಾನ, ಸರಕಾರೇತರ ಸಂಸ್ಥೆಗಳ ಭಾಗವಹಿಸುವಿಕೆ, ಸಾರ್ವಜನಿಕರಿಗೂ ಮಳಿಗೆಗಳನ್ನು ಸ್ಥಾಪಿಸುವ ಅವಕಾಶ ಮುಂತಾದ ಅಂಶಗಳನ್ನೊಳಗೊಂಡ ಯೋಜನೆಯನ್ನು ತಯಾರಿಸಿದವರೂ ಅವರೇ.

ರಾಜ್ಯಸರಕಾರಗಳು ಮತ್ತು ರೈಲ್ವೇ ಮುಂತಾದ ಸಂಸ್ಥೆಗಳ ಸಹಭಾಗಿತ್ವಕ್ಕಾಗಿ ತಿಳುವಳಿಕೆ ಪತ್ರಗಳಿಗೆ ಸಹಿಹಾಕುವುದಲ್ಲದೆ ಯೋಜನೆಯನ್ನು ಜನಪ್ರಿಯಗೊಳಿಸಲು ಜಾಹೀರಾತುಗಳನ್ನು ನೀಡಿದರು. ಜೊತೆಗೆ ಪ್ರಸಿದ್ಧ ವ್ಯಕ್ತಿಗಳೂ ಕೂಡ ಜನೌಷಧಿ ಖರೀದಿಸಿ ಬಳಸುವಂತೆ ಪ್ರೇರೇಪಿಸಿ ಜನರಲ್ಲಿ ಈ ಔಷಧಿಗಳ ಗುಣಮಟ್ಟದ ಬಗ್ಗೆ ವಿಶ್ವಾಸ ಮೂಡಿಸಿದರು. ನಮ್ಮ ತಾಯಿಯವರೂ ಸಹ ತಮ್ಮ ರಕ್ತದ ಏರೊತ್ತಡ ಸಮಸ್ಯೆಗೆ ಜನೌಷಧಿಯನ್ನೇ ಖರೀದಿಸಿದರು.

ಅಗ್ಗದಲ್ಲಿ ದೊರೆಯುವ ವಸ್ತುಗಳ ಗುಣಮಟ್ಟದಲ್ಲಿ ರಾಜಿಯುಂಟಾಗುವ ಸಂಭವವಿದೆ. ಜನಸಾಮಾನ್ಯರಿಗೆ ಈ ಕುರಿತ ಅನುಮಾನಗಳು ಸಹಜ. ಹೀಗಾಗಿ ಜನೌಷಧಿ ಮಳಿಗೆಗಳಲ್ಲಿ ದೊರೆಯುವ ಔಷಧಿಗಳ ಗುಣಮಟ್ಟವನ್ನು ಎರಡೆರಡು ಬಾರಿ ಪರೀಕ್ಷೆಗೊಳಪಡಿಸಲಾಗುತ್ತದೆ. ಜೊತೆಗೆ ಜನೌಷಧಿ ಮಳಿಗೆಗಳಲ್ಲಿ ವ್ಯಾಪಕ ಶ್ರೇಣಿಯ ಔಷಧಗಳೂ ದೊರೆಯುವುದು ಅಗತ್ಯ. ಅನಂತಕುಮಾರರು ಅಧಿಕಾರ ವಹಿಸಿಕೊಳ್ಳುವ ಮೊದಲಿನ 30 ವರ್ಷಗಳಲ್ಲಿ ಕೇವಲ 350 ಔಷಧಗಳು "ಅಗತ್ಯ ಔಷಧಗಳ ರಾಷ್ಟ್ರೀಯ ಪಟ್ಟಿ (NLEM) ಯಲ್ಲಿದ್ದವು. ಅನಂತಕುಮಾರರು ತಮ್ಮ ಅಧಿಕಾರಾವಧಿಯ 30 ತಿಂಗಳುಗಳಲ್ಲಿ ಅದನ್ನು 950 ಕ್ಕಿಂತಲೂ ಹೆಚ್ಚಿಗೆ ಏರಿಸಿದರು. ಜೊತೆಗೆ ಹೃದಯ ಚಿಕಿತ್ಸೆಗೆ ಬಳಸುವ ಸ್ಟೆಂಟ್ ಗಳು, ಮಂಡಿಚಿಪ್ಪಿನ ಕೃತಕ ಜೋಡಣೆಗಳು ಮತ್ತಿತರ ವೈದ್ಯಕೀಯ ವಸ್ತುಗಳನ್ನು ಕಡಿಮೆ ಬೆಲೆಗೆ ದೊರಕುವಂತೆ ಮಾಡಿದರು. ಕ್ಯಾನ್ಸರ್ ಮುಂತಾದ ಖಾಯಿಲೆಗಳ ದುಬಾರಿ ಬೆಲೆಯ ಔಷಧಗಳನ್ನು ಜನೌಷಧಿ ಪಟ್ಟಿಯಲ್ಲಿ ಸೇರಿಸುವುದರ ಮೂಲಕ ಬಡವರಿಗೂ ಉತ್ತಮ ಚಿಕಿತ್ಸೆಯನ್ನು ಕಡಿಮೆ ವೆಚ್ಚದಲ್ಲಿ ಪಡೆಯುವ ಅವಕಾಶ ದೊರೆಯಿತು. ತನ್ಮೂಲಕ ಕೇವಲ 30 ತಿಂಗಳುಗಳಲ್ಲಿ ಬಡವರ ವೈದ್ಯಕೀಯ ವೆಚ್ಚದಲ್ಲಿ 5000 ಕೋಟಿ ರೂಪಾಯಿಗಳ ಉಳಿತಾಯವಾಯಿತು. ಜೀವರಕ್ಷಕ ಔಷಧಿಗಳ ಬೆಲೆಯನ್ನು ನಿರ್ಧರಿಸಲು ಅನಂತಕುಮಾರ ಅವರು ಕೇಂದ್ರ ಸರಕಾರದ ಒಂದು ಸಮಿತಿಯನ್ನು ರೂಪಿಸಿದರು. ಈ ಸಮಿತಿಯು ಔಷಧಗಳ ತಯಾರಿಕೆಗೆ ತಗಲುವ ಸಮಗ್ರ ವೆಚ್ಚವನ್ನು ಗಣನೆಗೆ ತೆಗೆದುಕೊಂಡು ಅದರ ಮೇಲೆ ಶೇ 10 ರಿಂದ ಶೇ 15ರ ವರೆಗಿನ ಲಾಭಾಂಶವನ್ನು ಸೇರಿಸಿ ಅಂತಿಮ ಮಾರಾಟ ಬೆಲೆಯನ್ನು ನಿರ್ಧರಿಸುತ್ತಿದೆ.

ಜನೌಷಧಿ ಯೋಜನೆಯ ಯಶಸ್ಸಿನ ಬಗ್ಗೆ ಅನಂತಕುಮಾರರು ತುಂಬ ಆತುರದಲ್ಲಿದ್ದರು. ವಿದೇಶದಲ್ಲಿ ಚಿಕಿತ್ಸೆ ತೆಗೆದುಕೊಳ್ಳುತ್ತಿರುವಾಗಲೂ ಅವರು ಪ್ರತಿದಿನ ಪ್ರಾರಂಭವಾಗುತ್ತಿರುವ ಜನೌಷಧಿ ಕೇಂದ್ರಗಳ ವರದಿ ತರಿಸಿಕೊಳ್ಳುತ್ತಿದ್ದರು. ಅವರು ವಿದೇಶದಲ್ಲಿರುವಾಗಲೇ ಸುಮಾರು 4500ಕ್ಕೂ ಹೆಚ್ಚು ಮಳಿಗೆಗಳು ಕಾರ್ಯಾರಂಭ ಮಾಡಿದ್ದವು. ಅವರು ಇಹಲೋಕ ತ್ಯಜಿಸುವ ಹೊತ್ತಿಗೆ ಈ ಸಂಖ್ಯೆ 5000 ದಾಟಿದ್ದು ಸಾವಿರಕ್ಕೂ ಹೆಚ್ಚು ಔಷಧಗಳು ಅಗತ್ಯ ಔಷಧಗಳ ರಾಷ್ಟ್ರೀಯ ಪಟ್ಟಿಯನ್ನು ಸೇರಿಕೊಂಡಿದ್ದವು.

ಶ್ರೀಮತಿ ತೇಜಸ್ವಿನಿ ಅನಂತಕುಮಾರ್

# ಆರೋಗ್ಯ ಕ್ರಾಂತಿ – ಜನೌಷಧಿ ಯೋಜನೆ

ಪುಟ 7 ರಿಂದ

ಈ ಯೋಜನೆಗೆ ಕಾಯಕಲ್ಪ ನೀಡಲು ನಿರ್ಧರಿಸಿದರು.

**ಪ್ರೇರಣೆಯಾದ ಬಾಲ್ಯದ ಅನುಭವ**

ಬಡ ಜನರು ದುಬಾರಿ ಔಷಧೋಪಚಾರ ನೀಡಲು ಅಶಕ್ತರಾಗಿ ತಮ್ಮ ಪ್ರೀತಿಪಾತ್ರರನ್ನು ಅಕಾಲಿಕವಾಗಿ ಕಳೆದುಕೊಳ್ಳಬೇಕಾಗುವ ದುಃಖದ ಅನುಭವ ಅನಂತಕುಮಾರರಿಗೆ ಬಾಲ್ಯದಲ್ಲಿಯೇ ಆಗಿತ್ತು. ಅನಂತಕುಮಾರರ ತಾಯಿ ಗಿರಿಜಾ ಶಾಸ್ತ್ರಿಯವರು ಹುಬ್ಬಳ್ಳಿ ಧಾರವಾಡ ಅವಳಿ ನಗರಗಳ ಉಪ ಮಹಾಪೌರರಾಗಿ ಚುನಾಯಿತರಾದರು. ಅನಂತಕುಮಾರರು ಆಗಿನ್ನೂ ವಿದ್ಯಾರ್ಥಿಯಾಗಿದ್ದರು. ಉಪ ಮೇಯರ್ ಆಗಿದ್ದರೂ ಮನೆಯಲ್ಲಿ ಬಡತನ. ಬಡತನದೊಂದಿಗೆ ಕ್ಯಾನ್ಸರ್ ಕಾಯಿಲೆಯೂ ಗಿರಿಜಾ ಶಾಸ್ತ್ರಿಯವರ ಬೆನ್ನು ಹತ್ತಿತ್ತು. ಮನೆಯ ಯಜಮಾನ ನಾರಾಯಣ ಶಾಸ್ತ್ರಿಯವರ ಆದಾಯದ ಎರಡರಷ್ಟು ಗಿರಿಜಾ ಶಾಸ್ತ್ರಿಯವರ ಚಿಕಿತ್ಸೆಗೆ ವ್ಯಯವಾಗುತ್ತಿತ್ತು. ದುಬಾರಿ ಬೆಲೆಯ ಔಷಧಿಗಳನ್ನು ಒಟ್ಟಿಗೆ ಕೊಳ್ಳಲು ಹಣವಿಲ್ಲದಿದ್ದುದರಿಂದ ಪ್ರತಿದಿನವೂ ಒಂದೊಂದೇ ಮಾತ್ರೆಯನ್ನು ಖರೀದಿಸಿ ಸೇವಿಸುವ ಅನಿವಾರ್ಯ ಒದಗಿತು. ಜನಸಾಮಾನ್ಯರಿಗೆ ಸಮಾನವಾದ ಈ ಬವಣೆ ಅನಂತಕುಮಾರರ ಮನಸ್ಸಿನಲ್ಲಿ ಉಳಿದುಕೊಂಡು ಕಾಡತೊಡಗಿತು. ಹೀಗಾಗಿ ತಮಗೆ ಸಿಕ್ಕ ಮೊದಲ ಅವಕಾಶವನ್ನೇ ಅವರು ಸಮರ್ಥವಾಗಿ ಬಳಸಿಕೊಂಡರು.

ರಾಸಾಯನಿಕ ಮತ್ತು ರಸಗೊಬ್ಬರ ಖಾತೆಯ ಹೊಣೆಯನ್ನು ವಹಿಸಿಕೊಂಡ ಕ್ಷಣದಿಂದಲೇ ಅವರು ಜನೌಷಧಿ ಪರಿಯೋಜನೆಯ ವ್ಯಾಪ್ತಿಯನ್ನು ಹಿಗ್ಗಿಸಿ ಅದನ್ನು ಜನಪ್ರಿಯಗೊಳಿಸಲು ಉದ್ಯುಕ್ತರಾದರು. ಮೊದಲಿಗೆ ರಾಜ್ಯಸರಕಾರಗಳ ಮತ್ತು ಇತರ ಆಸಕ್ತರ ಸಹಕಾರವನ್ನು ಅಪೇಕ್ಷಿಸಿ ಆಂಧ್ರಪ್ರದೇಶ, ಮಹಾರಾಷ್ಟ್ರ, ಛತ್ತೀಸಘಡ, ಅರುಣಾಚಲ ಪ್ರದೇಶ, ಕರ್ನಾಟಕ ಮುಂತಾ ರಾಜ್ಯಗಳೊಡನೆ ಮತ್ತು ಫಾರ್ಮಸಿ ಕೌನ್ಸಿಲ್ಆಫ್ಇಂಡಿಯಾದಂತಹ ಸಂಸ್ಥೆಗಳ ಜೊತೆ ತಿಳುವಳಿಕೆ ಪತ್ರಗಳ (MOU) ಮೂಲಕ ಒಪ್ಪಂದ ಮಾಡಿಕೊಂಡರು. ಜನೌಷಧಿ ಯೋಜನೆಯ ಬುಟ್ಟಿಯಲ್ಲಿ ನೂರಾರು ಜೀವರಕ್ಷಕ ಔಷಧಗಳು ಸೇರಿಕೊಂಡವು.

ಯೋಜನೆಯನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ವ್ಯಾಪಕವಾದ ಆಂದೋಲನವನ್ನೇ ನಡೆಸಬೇಕಾಯಿತು. 2016ರ ಫೆಬ್ರವರಿಯಲ್ಲಿ 108 ಜನೌಷಧಿ ಕೇಂದ್ರಗಳನ್ನು ಏಕಕಾಲದಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಉದ್ಘಾಟಿಸಿ ದೇಶದ ಜನರ ಗಮನವನ್ನು ಸೆಳೆದು ಅವರಲ್ಲಿ ವಿಶ್ವಾಸ ಬೆಳೆಸಿದರು. ಕರ್ನಾಟಕದ ಎಲ್ಲ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ 200 ಕ್ಕೂ ಹೆಚ್ಚು ಜನೌಷಧಿ ಕೇಂದ್ರಗಳನ್ನು ಮೊದಲ ವರ್ಷದಲ್ಲಿಯೇ ತೆರೆಯಲಾಯಿತು. ಹೀಗೆ 2014ರಲ್ಲಿ ಬೆರಳೆಣಿಕೆಯಷ್ಟಿದ್ದ ಮಳಿಗೆಗಳ ಸಂಖ್ಯೆ 2017 ಹೊತ್ತಿಗೆ 3000 ದಾಟಿತು.






ಇದಕ್ಕೆ ಅನಂತ ಕುಮಾರರ ರಾಜಕೀಯ ಇಚ್ಛಾಶಕ್ತಿಯೇ ಕಾರಣ ಎಂದರೆ ಅತಿಶಯೋಕ್ತಿಯಲ್ಲ.

**ಟಿಸಿಲೊಡೆದ ವಟವೃಕ್ಷ**

ಅನಂತಕುಮಾರರು ಇಂದು ನಮ್ಮೊಂದಿಗಿಲ್ಲ. ಆದರೆ ಅವರು ಆಸಕ್ತಿಯಿಂದ ಪೋಷಿಸಿದ ಜನೌಷಧಿ ವಟವೃಕ್ಷವು ಇಂದು ಸಮೃದ್ಧವಾಗಿ ಚಿಗುರೊಡೆದು ದೇಶದಾದ್ಯಂತ ವ್ಯಾಪಿಸಿ 7500ಕ್ಕೂ ಹೆಚ್ಚು ಶಾಖೆಗಳನ್ನು ಹೊಂದಿ ಬಡವರ ಮತ್ತು ಕೆಳಮಧ್ಯಮ ವರ್ಗದವರ ಆಶಾಕಿರಣವಾಗಿದೆ. ಇಂದು 1038 ಔಷಧ ಉತ್ಪನ್ನಗಳು ಹಾಗೂ 127 ಶಸ್ತ್ರಚಿಕಿತ್ಸೆಗೆ ಬಳಸುವ ವಸ್ತುಗಳು ಜನೌಷಧಿ ಬುಟ್ಟಿಯಲ್ಲಿವೆ. ಪ್ರಧಾನ ಮಂತ್ರಿಗಳು ಹೇಳಿರುವಂತೆ ದೇಶದ ಬಡಜನರ ಆರೋಗ್ಯವೆಚ್ಚದಲ್ಲಿ ವರ್ಷವೊಂದಕ್ಕೆ 3600 ಕೋಟಿ ರೂಪಾಯಿಗಳ ಇಳಿತಾಯವಾಗುತ್ತಿದ್ದು ಅವರು ಆ ಹಣವನ್ನು ಇತರ ಜೀವನಾವಶ್ಯಕ ವಸ್ತುಗಳ ಖರೀದಿಗೆ ವ್ಯಯಿಸುತ್ತಿದ್ದಾರೆ. ತನ್ಮೂಲಕ ತಮ್ಮ ಜೀವನದ ಗುಣಮಟ್ಟವನ್ನು ಉನ್ನತೀಕರಿಸಿಕೊಂಡಿದ್ದಾರೆ. ಇಂದು ಕನ್ನಡಿಗರೇ ಆದ ಶ್ರೀ ಸದಾನಂದ ಗೌಡರ ನೇತೃತ್ವದಲ್ಲಿ (BPPI) ಸಂಸ್ಥೆಯು ತನ್ನ ಬುಟ್ಟಿಯಲ್ಲಿ ಇನ್ನಷ್ಟು ಉತ್ಪನ್ನಗಳನ್ನು ಸೇರಿಸಿಕೊಂಡು 10000 ಶಾಖೆಗಳನ್ನು ಸ್ಥಾಪಿಸುವ ಗುರಿಯತ್ತ ದಾಪುಗಾಲಿಟ್ಟಿದೆ. ಬಡವರ ಅನ್ನ, ಅಕ್ಷರಗಳ ಕನಸುಗಳ ಜೊತೆಗೆ ಆರೋಗ್ಯದ ಕನಸುಗಳೂ ನನಸಾಗುತ್ತಿವೆ.

ಜನೌಷಧಿ ಕೇಂದ್ರಗಳು ದೇಶದ ಉದ್ದಗಲಕ್ಕೂ ಸಾವಿರಾರು ಉದ್ಯೋಗಾವಕಾಶಗಳನ್ನು ಸೃಷ್ಟಿಸಿವೆ. ಸುಮಾರು 1000 ಕೇಂದ್ರಗಳನ್ನು ಮಹಿಳೆಯರೇ ನಡೆಸುತ್ತಿದ್ದು ಅವರು ಇಂದು ಆರ್ಥಿಕವಾಗಿ ಸ್ವಾವಲಂಬಿಯಾಗಿದ್ದಾರೆ. ಗ್ರಾಮೀಣ ಮಹಿಳೆಯರ ಬದುಕಿನಲ್ಲಿ ಜನೌಷಧಿ ಕೇಂದ್ರಗಳು ಮಹತ್ತರ ಪಾತ್ರ ವಹಿಸುತ್ತಿವೆ. ಸ್ಯಾನಿಟರಿ ಪ್ಯಾಡ್ ಗಳನ್ನು ಬರೇ 2.5 ರೂಪಾಯಿಗೆ ಲಭ್ಯವಾಗುವಂತೆ ಮಾಡುವುದರ ಮೂಲಕ ಮುಟ್ಟಿನ ಕಾಲದ ನೈರ್ಮಲ್ಯವನ್ನು ಕಾಪಾಡಿಕೊಳ್ಳಲು ಅವರಿಗೆ ನೆರವಾಗಿದೆ. ಇದುವರೆಗೆ ಈ ಕೇಂದ್ರಗಳಲ್ಲಿ 11 ಕೋಟಿಗೂ ಅಧಿಕ ನ್ಯಾಪ್ ಕಿನ್ ಗಳು ಮಾರಾಟವಾಗಿರುವುದು ಈ ಉಪಕ್ರಮದ ಅಗತ್ಯಕ್ಕೆ ಮತ್ತು ಯಶಸ್ಸಿಗೆ ಸಾಕ್ಷಿಯಾಗಿದೆ. ಅದೇ ರೀತಿ ಗರ್ಭಿಣಿ ಮಹಿಳೆಗೆ ಅವಶ್ಯ ಪೋಷಕಾಂಶ ಮತ್ತು ಇತರ ಪೂರಕ ಪೋಷಕಾಂಶಗಳನ್ನೂ ಜನೌಷಧಿ ಕೇಂದ್ರಗಳಲ್ಲಿ " ಜನೌಷಧಿ ಜನನಿ' ಆಂದೋಲನದಡಿಯಲ್ಲಿ ಒದಗಿಸಲಾಗುತ್ತಿದೆ.

ಆರೋಗ್ಯದ ವಿಷಯದಲ್ಲಿ ಎಲ್ಲ ನಾಗರಿಕರ ನಡುವೆ ಸಮಾನತೆ ಸಾಧಿಸಿರುವ ಈ ಪ್ರಧಾನ ಮಂತ್ರಿ ಜನೌಷಧಿ ಪರಿಯೋಜನೆಯ ಯಶಸ್ಸು ಅನಂತಕುಮಾರರ ಸಾಮಾಜಿಕ, ರಾಜಕೀಯ ಜೀವನದ ಒಂದು ಸಾರ್ಥಕ ಆಯಾಮವಾಗಿದೆ.

**-ಕೆ. ಜನಾರ್ದನ ತುಂಗ**

# ನಾಯಕತ್ವಕ್ಕೆ ಇಂಬುಕೊಟ್ಟ ಗೆಳೆಯರ ಒತ್ತಾಸೆ

ಅನುಭವಕಥನ: ಅಚ್ಯುತ ಲಿಮಯೆ
ನಿರೂಪಣೆ: ಟಿ.ಎಸ್. ಗೋಪಾಲ್

೧೯೭೭. ಎಂಟಿಎಸ್ ಕಾಲೊನಿಯ ಎದುರಿನ ಮೈದಾನದಲ್ಲಿ ಹಲವರು ಕಾಲೇಜು ಯುವಕರು ಕ್ರಿಕೆಟ್ ಆಡುತ್ತಿದ್ದಾರೆ. ನೋಡುತ್ತ ನಿಂತವರು ಇನ್ನು ಕೆಲವರು. ಅವರಲ್ಲೊಬ್ಬ ಪ್ರೇಕ್ಷಕ ಆಗಿಂದಾಗ್ಗೆ ಆಟದ ಬಿಡುವಿನಲ್ಲಿ ತನ್ನ ಗೆಳೆಯ ವಿಕೆಟ್ ಕೀಪರನನ್ನು ಮಾತಿಗೆಳೆಯುತ್ತಿದ್ದಾನೆ. ಬಹುಶಃ ಆಟ ಬಿಟ್ಟು ತನ್ನೊಡನೆ ಬರುವಂತೆ ಗೆಳೆಯನನ್ನು ಅನುನಯದಲ್ಲಿ ಒಲಿಸಲು ಪ್ರಯತ್ನಿಸುವಂತೆ ತೋರುತ್ತಿದೆ. ಆದರೆ, ಆ ವಿಕೆಟ್ ಕೀಪರ್ ಆಟವನ್ನು ಬಿಟ್ಟು ಹೊರಡಲು ಮನಸ್ಸು ಮಾಡುತ್ತಿಲ್ಲ. ಸ್ನೇಹಿತನ ಆಹ್ವಾನವನ್ನು ನಿರಾಕರಿಸುತ್ತಿದ್ದಾನೆ. ಆಟ ಮುಗಿದ ಬಳಿಕ ಇವರ ಮಾತುಕತೆ ಮುಂದುವರಿದಿದ್ದು ಹೀಗೆ:

" ನಾ ಯಾಕ ಬರಬೇಕು ಹೇಳು" ಕ್ರಿಕೆಟ್ ಆಟಗಾರ ಗೆಳೆಯನನ್ನು ಕೇಳಿದ.

" ಯಾಕಂದ್ರ ನಾಳೆ ಬೈಠಕ್ ಅದ, ಪರಿಷತ್ತಿನ ಮುಂದಿನ ಕಾರ್ಯಕ್ರಮ ಏನು ಮಾಡೂದು, ಚಟುವಟಿಕೆ ಅದೂ ಇದೂ ಚರ್ಚೆ ಮಾಡೂದದ"

" ಅದು ನೀವ್ ಮಾಡೂ ಕೆಲಸ , ನಾನ್ಯಾಕೆ?"

" ನೀನೂ ನಮ್ಮ ಗುಂಪಿನೊಳಗ ಒಬ್ಬಾಂವ ಅಂದಮ್ಯಾಲ ನೀನೂ ಬರಲಿಕ್ಕೇ ಬೇಕಲ್ಲ.."

" ನೋಡಪಾ, ನೀನೇನೋ ಪ್ರಾಂತ ಕಾರ್ಯಕಾರಿಣಿ ಸದಸ್ಯ ಅಂತ ಹುದ್ದೆ ವಹಿಸಿಕೊಂಡಿದ್ದೀ. ಅಂದಮ್ಯಾಲ ಕೆಲಸ ಮಾಡು, ಅಲ್ಲಿಗೆ ಬರಲಿಕ್ಕೆ ನಾನೇನು ಪರಿಷತ್ತಿಗೆ ಅಧ್ಯಕ್ಷನಾ?"

" ಕಾರ್ಯಕರ್ತ ಹೌದಲ್ಲ!"

" ನೀ ಹತ್ತು ಜನರ ಹಾಂಗ ಕಾರ್ಯಕರ್ತ ಇದ್ದೀ, ಕೆಲಸ ಮಾಡಲಿಕ್ಕೆ ಬಾ ಅಂದ್ರ ನಾ ಬರಾಂಗಿಲ್ಲ. ನನಗೇನರೆ ಜವಾಬ್ದಾರಿ ಕೊಡು, ಬರ್ತೀನಿ"

" ಏನು ಜವಾಬ್ದಾರಿ ಕೊಡೋದೋ ಮಹಾರಾಯ, ವಿದ್ಯಾರ್ಥಿಯನ್ನ ಅಧ್ಯಕ್ಷ ಮಾಡಲಿಕ್ಕ ಬರ್ತದೇನು? "

" ಅಧ್ಯಕ್ಷ ಆಗೋದೇ ಜವಾಬ್ದಾರಿ ಅಂತ ನಾ ಎಲ್ಲಿ ಹೇಳಿದೆ? ಕಾರ್ಯದರ್ಶಿ ಆಗಬಹುದಲ್ಲ"

" ಇನಾಂದಾರ್ ಈಗ ಕಾರ್ಯದರ್ಶಿ ಆಗ್ಯಾನಲ್ಲ, ಮುಂದಿನ ವರ್ಷ ಅವನ ಇಂಜಿನಿಯರಿಂಗ್ ಕೋರ್ಸ್ ಮುಗೀತದ. ಆಮ್ಯಾಲೆ ನೀನೇ ಕಾರ್ಯದರ್ಶಿ ಆಯಿತಿಲ್ಲೋ ಈಗ ನನ್ನ ಜೊತೆಗೆ ಬಾ"

" ಆಗ್ಲೇ ಹೇಳಿದೆನಲ್ಲ, ನನಗ ಒಂದು ಜವಾಬ್ದಾರಿ ಕೆಲಸ ಕೊಡೂದಾದ್ರ ಬರ್ತೀನಿ ಅಂತ"

" ಮುಂದಿನ ವರ್ಷ ಕಾರ್ಯದರ್ಶಿ ನೀನೇ ಅಂತ ಹೇಳಿದೆನಲ್ಲ"

"ಈಗ?"

" ಈಗ ಜಂಟಿ ಕಾರ್ಯದರ್ಶಿ ಆಗೀಯಂತ, ಬಾರೋ ಮಾರಾಯ"

ಈ ಸಂಭಾಷಣೆ ನಡೆದದ್ದು ಇಬ್ಬರು ಆತ್ಮೀಯ ಗೆಳೆಯರ ನಡುವೆ. ವಿಕೆಟ್ ಕೀಪರ್ ಆಗಿ ಕ್ರಿಕೆಟ್ ಆಡುತ್ತಿದ್ದ ಕಾಲೇಜು ಹುಡುಗ ಅನಂತಕುಮಾರ್. ಆತನಿಗೆ ವಿದ್ಯಾರ್ಥಿ ಪರಿಷತ್ತಿನ ಜಂಟಿ ಕಾರ್ಯದರ್ಶಿಯ ಹುದ್ದೆ ವಹಿಸಿ ಸಂಘಟನೆಗೆ ಬರುವಂತೆ ಒತ್ತಾಯಿಸಿದ ಹುಬ್ಬಳ್ಳಿಯ ಗೆಳೆಯ ಅಚ್ಯುತ ಲಿಮಯೆ.

ಅನಂತಕುಮಾರನಲ್ಲಿದ್ದ ನಾಯಕತ್ವದ ಗುಣಗಳನ್ನೂ ಕಾರ್ಯಕುಶಲತೆ, ಕರ್ತವ್ಯಶ್ರದ್ಧೆಗಳನ್ನೂ ಗುರುತಿಸಿ ಆತನನ್ನು ಸಂಘಟನಾಕಾರ್ಯದಲ್ಲಿ ತೊಡಗಿಸುವ ಪ್ರೇರಣೆ ನೀಡಿದವರಲ್ಲಿ ಅಚ್ಯುತ ಲಿಮಯೆ ಮತ್ತವರ ಗೆಳೆಯರ ಗುಂಪಿನ ಪಾತ್ರ ಮಹತ್ವದ್ದು.

******

೧೯೭೪ರಲ್ಲಿ ಹುಬ್ಬಳ್ಳಿಗೆ ಬಂದಿದ್ದ ಲೋಕನಾಯಕ್ ಜಯಪ್ರಕಾಶ ನಾರಾಯಣರ ಆಂದೋಲನ, ವಿಚಾರಗಳಿಂದ ಪ್ರಭಾವಿತರಾದವರಲ್ಲಿ ಹುಬ್ಬಳ್ಳಿಯ ಅಚ್ಯುತ ಲಿಮಯೆ ಎಂಬ ಯುವಕನೂ ಒಬ್ಬ. ಅದಕ್ಕೆ ಮುನ್ನ ಆರ್ ಎಸ್ ಎಸ್, ವಿದ್ಯಾರ್ಥಿ ಪರಿಷತ್ ಮತ್ತಿತರ ಸಂಘಟನೆಗಳ ಕಾರ್ಯಚಟುವಟಿಕೆಗಳಲ್ಲಿ ತೊಡಗಿಲ್ಲದಿದ್ದರೂ, ಜಯಪ್ರಕಾಶರ ಆಂದೋಲನದ ಕರೆ ಅಚ್ಯುತನನ್ನು ಆಕರ್ಷಿಸಿತ್ತು. ಅದಕ್ಕನುಗುಣವಾಗಿ ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದ ಅಚ್ಯುತ ಲಿಮಯೆ ಪಿ.ಯು.ಸಿ ಓದುತ್ತಿದ್ದ ಕಾಲದಲ್ಲೇ ದೇಶ ೧೯೭೫ರಲ್ಲಿ ತುರ್ತುಪರಿಸ್ಥಿತಿಯ ಸಂಕೋಲೆಗೆ ಸಿಲುಕಿಕೊಂಡಿತು. ಆ ವೇಳೆಗೆ ಹುಬ್ಬಳ್ಳಿಯಲ್ಲೇ ಇದ್ದ ಅಚ್ಯುತನ ಸೋದರಮಾವ ನರಹರಿ ಫಡ್ಕೆಯವರು ಆರ್ ಎಸ್ ಎಸ್ ಸಂಘಟನೆಯ ಕಾರ್ಯಕರ್ತರಾಗಿದ್ದವರು. ಹುಬ್ಬಳ್ಳಿಯಲ್ಲಿದ್ದ ಆರ್ ಎಸ್ ಎಸ್ ಕಾರ್ಯಾಲಯಕ್ಕೆ ಪೋಲಿಸರು ಬೀಗಮುದ್ರೆ ಹಾಕಿದಾಗ, ಹಿಂಬಾಗಿಲ ಮೂಲಕ ಕಚೇರಿಯಲ್ಲಿದ್ದ ಸಾಮಗ್ರಿಗಳನ್ನು ತೆರವುಮಾಡಲು ಫಡ್ಕೆಯವರಿಗೆ ಅಚ್ಯುತ ನೆರವಾಗಿದ್ದರು. ಆ ಸಂದರ್ಭದಲ್ಲೊಮ್ಮೆ ಸಂಘದ ಬೈಠಕ್ ಅನ್ನು ರಹಸ್ಯವಾಗಿ ಏರ್ಪಡಿಸಲಾಗಿತ್ತು. ಹೊ.ವೆ.ಶೇಷಾದ್ರಿಯವರು ಸದಸ್ಯರನ್ನು ಉದ್ದೇಶಿಸಿ ಮಾತನಾಡುವವರಿದ್ದರು. ಅಚ್ಯುತ ಲಿಮಯೆ ಈ ಭೂಗತ ಬೈಠಕ್ಕಿನಲ್ಲಿ ಪಾಲ್ಗೊಂಡಿದ್ದರು. ಶೇಷಾದ್ರಿಯವರು ಭಾಷಣ ಮುಗಿಸಿ, ತುರ್ತುಪರಿಸ್ಥಿತಿಯ ವಿರುದ್ಧ ಹೋರಾಟಕ್ಕೆ ಮುಂದಾಗಲು ಕರೆನೀಡಿದರು. ಈ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಯಾರು ಸಿದ್ಧರಿದ್ದೀರಿ ಕೈಯೆತ್ತಿ ಎಂದು ನಾಯಕರು ಹೇಳುವಾಗ, ಅರವತ್ತು ಜನ ಸೇರಿದ್ದ ಸಭೆಯಲ್ಲಿ ಕೈಯೆತ್ತಿದ್ದು ಅಚ್ಯುತ ಲಿಮಯೆ ಒಬ್ಬನೇ!

ಅವತ್ತು ಮೊದಲುಗೊಂಡ ಉತ್ಸಾಹದ ಪ್ರತಿಕ್ರಿಯೆ ನಿರಂತರವಾಗಿ ಮುಂದುವರಿಯಿತು. ತುರ್ತುಪರಿಸ್ಥಿತಿ ಘೋಷಣೆಯಾದ ಒಂದು ತಿಂಗಳ ನಂತರ ಜನಜಾಗೃತಿಗಾಗಿ ನಡೆಸಿದ ಘಂಟಾನಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಅಚ್ಯುತನಿಗೆ ವಿಷ್ಣುಕಾಂತ ಚಟಪಲ್ಲಿ ಮೊದಲಾದ ತರುಣ ಕಾರ್ಯಕರ್ತರ ಪರಿಚಯ ಬೆಳೆಯಿತು. ಮುಂದಿನ ದಿನಗಳಲ್ಲಿ ಹುಬ್ಬಳ್ಳಿಯಲ್ಲಿ ಸಂಘ ಪೂರ್ಣಾವಧಿ ಕಾರ್ಯಕರ್ತರಾಗಿದ್ದ ನಗರ ಪ್ರಚಾರಕ ಮಂಗೇಶ ಭೆಂಡೆಯವರು ಅನಂತಕುಮಾರ ಎಂಬ ಯುವಕನನ್ನು ಅಚ್ಯುತನಿಗೆ ಪರಿಚಯಿಸಿದರು.

ಅಚ್ಯುತ ಲ್ಯಾಮಿಂಗ್ಟನ್ ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗ ಅನಂತಕುಮಾರ ಆತನಿಗಿಂತ ಒಂದು ವರ್ಷ ಕಿರಿಯ ತರಗತಿಯಲ್ಲಿ ಓದುತ್ತಿದ್ದು ಮುಖಪರಿಚಯವೇನೋ ಇದ್ದಿತು. ಈ ಯುವಕರ ಗೆಳೆತನವು ಬೆಳೆಯಲು ಈಗ ತುರ್ತುಪರಿಸ್ಥಿತಿಯ ಹೋರಾಟವೊಂದು

ಪುಟ 10ರಲ್ಲಿ ಮುಂದುವರೆದಿದೆ



# ನಾಯಕತ್ವಕ್ಕೆ ಇಂಬುಕೊಟ್ಟ ಗೆಳೆಯರ ಒತ್ತಾಸೆ


ಗೆಳೆಯ ಅಚ್ಯುತ ಲಿಮಯೆ ಅವರೊಂದಿಗೆ ಅನಂತ ಕುಮಾರ್

ಪುಟ 9 ರಿಂದ ನೆಪವಾಗಿ ಪರಿಣಮಿಸಿತು . ಇವರೊಡನೆ ಗುಡ್ಡು ಇನಾಮದಾರ್, ವಿಷ್ಣುಕಾಂತ ಚಟಪಲ್ಲಿ, ಅನಿಲ್ ಸಹಸ್ರಬುದ್ಧೆ ಮೊದಲಾದವರು ಸೇರಿ ಸಶಕ್ತವಾದ ಯುವಕರ ಪಡೆಯೊಂದು ಸನ್ನದ್ಧವಾಯಿತು. ಕಾಲೇಜಿನಲ್ಲಿ ಕರಪತ್ರ ಹಂಚುವುದು, ಕಪ್ಪುಹಲಗೆಯ ಮೇಲೆ ಘೋಷಣೆಗಳನ್ನು ಬರೆಯುವುದು ಮತ್ತಿತರ ಚಟುವಟಿಕೆಗಳಲ್ಲಿ ಅಚ್ಯುತ ಲಿಮಯೆಯೊಡನೆ ಅನಂತಕುಮಾರನೂ ಶ್ರದ್ಧೆ, ಉತ್ಸಾಹಗಳಿಂದ ಪಾಲ್ಗೊಳ್ಳುತ್ತಿದ್ದ.

೧೯೭೫ ಡಿಸೆಂಬರ್. ಸತ್ಯಾಗ್ರಹ ಹೋರಾಟಕ್ಕಾಗಿ ಯುವಕರ ತಂಡಗಳನ್ನು ರೂಪಿಸುವ ಹೊಣೆಯನ್ನು ನರಹರಿ ಫಡ್ಕೆಯವರಿಗೆ ವಹಿಸಲಾಗಿತ್ತು. ಹೀಗೆ ಆಯ್ಕೆಯಾದ ಹದಿನಾಲ್ಕು ಜನರ ಒಂದು ತಂಡದಲ್ಲಿ ಏಳು ಜನ ಸೈನ್ಸ್ ಕಾಲೇಜಿನವರು; ಇನ್ನುಳಿದ ಏಳು ಮಂದಿ ಕಾಮರ್ಸ್ ಕಾಲೇಜಿನವರು. ಪಿ.ಸಿ. ಜಾಬಿನ್ ಸೈನ್ಸ್ ಕಾಲೇಜಿನಿಂದ ಬಂದವರಲ್ಲಿ ದ್ವಿತೀಯ ಪಿಯುಸಿಯ ವಿಷ್ಣುಕಾಂತ ಚಟಪಲ್ಲಿ, ಪ್ರದೀಪ್ ಮುಜುಂದಾರ, ಅಚ್ಯುತ ಲಿಮಯೆ ಜೊತೆಗೆ ಪ್ರಥಮ ಪಿಯುಸಿಯ ಅನಂತಕುಮಾರ ಇವರೆಲ್ಲ ಇದ್ದರು.

ಡಿಸೆಂಬರ್ ೮ನೇ ತಾರೀಕಿನಂದು ಸತ್ಯಾಗ್ರಹ ನಿಗದಿಯಾಗಿದ್ದ ದಿನ. ಈ ತಂಡದವರನ್ನೆಲ್ಲ ಪೋಲೀಸರು ಬಂಧಿಸಿ ಸ್ಟೇಶನ್ನಿನಲ್ಲಿ ಕೂರಿಸಿದ್ದರು. ಆಮೇಲೆ ಸೆರೆಮನೆಗೆ ಕಳುಹಿಸಿದರು. ಮೂವತ್ತೆಂಟು ದಿನಗಳ ಸೆರೆವಾಸದ ಅವಧಿಯಲ್ಲಿ ಅನಂತ-ಅಚ್ಯುತರ ಗೆಳೆತನ ದೃಢವಾಗಿ ಬೆಳೆಯಿತು. ಮರಾಠಿ ಓದಿ ಬೆಳೆದಿದ್ದ ಅಚ್ಯುತನಿಗೆ ಕನ್ನಡ ಕಲಿಯುವುದಕ್ಕೆ ಈ ಸೆರೆವಾಸ ಅವಕಾಶ ಮಾಡಿಕೊಟ್ಟಿತು.

೧೯೭೭ರಲ್ಲಿ ತುರ್ತುಪರಿಸ್ಥಿತಿ ಕೊನೆಗೊಂಡಿತು. ಚುನಾವಣೆಗಳು ನಡೆದವು. ಆ ಸಂದರ್ಭದಲ್ಲೂ ಅಚ್ಯುತ ಲಿಮಯೆ ಅನಂತಕುಮಾರರು ಜೊತೆಗೂಡಿ ಚಟುವಟಿಕೆಗಳಲ್ಲಿ ಭಾಗವಹಿಸಿದ್ದುಂಟು. ಇದಾದಮೇಲೆ ಹುಬ್ಬಳ್ಳಿಯಲ್ಲಿ ವಿದ್ಯಾರ್ಥಿ ಪರಿಷತ್ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಹಿರಿಯ ಮುಖಂಡ ಪಿ.ವಿ. ಕೃಷ್ಣಭಟ್ ಆಗಮಿಸಿದರು. ತಾವು ಸೆರೆಮನೆಯಲ್ಲಿ ಇದ್ದಾಗ ತಮ್ಮೊಡನಿದ್ದ ಶ್ರೀಕಾಂತ ದೇಸಾಯಿಯವರು ವಿದ್ಯಾರ್ಥಿ ಪರಿಷತ್ತಿನ ಪ್ರಾಂತ ಕಾರ್ಯದರ್ಶಿಯಾಗಿದ್ದವರು. ಅವರು ತೆಗೆದುಕೊಂಡ ಅಭ್ಯಾಸವರ್ಗವು ಈ ಯುವಕರಿಗೆ ವಿದ್ಯಾರ್ಥಿ ಪರಿಷತ್ತಿನ ಚಟುವಟಿಕೆಗಳಲ್ಲಿ ಭಾಗವಹಿಸಲು ಈಗಾಗಲೇ ಪ್ರೇರಣೆ ನೀಡಿತ್ತು. ಕೃಷ್ಣಭಟ್ಟರು ಬೈಠಕ್ ನಡೆಸಿ, ಪರಿಷತ್ತಿನ ಚಟುವಟಿಕೆಗಳನ್ನು ಆರಂಭಿಸುವ ಬಗೆಗೆ, ನಡೆಸಬೇಕಾದ ಕಾರ್ಯದ ಸ್ವರೂಪದ ಬಗೆಗೆ ಬಹುಮೂಲ್ಯವಾದ ಮಾರ್ಗದರ್ಶನ ನೀಡಿದರು. ಆ ಹೊತ್ತಿಗೆ ಅಚ್ಯುತ ಲಿಮಯೆ ಧಾರವಾಡದಲ್ಲಿ ಡಿಪ್ಲೊಮಾ ವ್ಯಾಸಂಗಕ್ಕೆ ತೊಡಗಿದ್ದರೆ, ಅನಂತಕುಮಾರ ಪಿಯುಸಿ ಮುಗಿಸಿ ಡಿಗ್ರಿ ಕಾಲೇಜು ಮೆಟ್ಟಿಲೇರುವುದರಲ್ಲಿದ್ದರು. ಗುಡ್ಡು ಇನಾಂದಾರ್ ಮತ್ತು ಅನಿಲ್ ಸಹಸ್ರಬುದ್ಧೆ ಹುಬ್ಬಳ್ಳಿಯಲ್ಲೇ ಇಂಜಿನಿಯರಿಂಗ್ ಓದುತ್ತಿದ್ದರು. ಬಾಗಲಕೋಟೆಯ ಇಂಜಿನಿಯರಿಂಗ್ ಕಾಲೇಜಿನಲ್ಲಿದ್ದ ವಿಷ್ಣುಕಾಂತರಿಗೆ ಕಾಲೇಜು ವರ್ಗಾವಣೆ ಸಿಕ್ಕು ಹುಬ್ಬಳ್ಳಿಗೇ ಬಂದಿದ್ದರು. ಹೀಗಾಗಿ ಇಡಿಯ ಸ್ನೇಹಿತರ ಗುಂಪು ಉತ್ಸಾಹದಿಂದ ಪರಿಷತ್ತಿನ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಮುಂದಾಯಿತು. ನಿಶ್ಚೇತನವಾಗಿದ್ದ ಪರಿಷತ್ತಿಗೆ ಈ ಯುವಕರ ತಂಡ ನವಚೈತನ್ಯವನ್ನು ನೀಡಿತು. ಪ್ರತಿ ಶನಿವಾರ ಶಿವಮೊಗ್ಗದಿಂದ ಹೊರಟು ಸಂಜೆಯ ವೇಳೆಗೆ ಹುಬ್ಬಳ್ಳಿಗೆ ಬರುತ್ತಿದ್ದ ಕೃಷ್ಣಭಟ್ಟರು ಮರುದಿನ ಭಾನುವಾರವಿಡೀ ಈ ತಂಡದೊಂದಿಗೆ ಇದ್ದು ಮಾರ್ಗದರ್ಶನ ನೀಡುತ್ತಿದ್ದರು.

ಅಚ್ಯುತ ಲಿಮಯೆಯನ್ನು ಪ್ರಾಂತ ಕಾರ್ಯಕಾರಣಿಯ ಸದಸ್ಯನನ್ನಾಗಿ ಆರಿಸಲಾಗಿತ್ತು. ಅವರು ಬೆಂಗಳೂರಿಗೂ ಹೋಗಿ ಅಭ್ಯಾಸವರ್ಗದಲ್ಲಿ ಭಾಗವಹಿಸಿ ಬಂದರು. ಕೃಷ್ಣಭಟ್ಟರ ಸೂಚನೆಯ ಮೇರೆಗೆ , ಅಚ್ಯುತ ಲಿಮಯೆ ಸದಸ್ಯರನ್ನು ಸಂಪರ್ಕಿಸಿ ಪರಿಷತ್ತಿನ ಕಾರ್ಯಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಹುರಿದುಂಬಿಸುವ ಕೆಲಸ ಪ್ರಾರಂಭಿಸಿದರು.

ಅಚ್ಯುತ ಲಿಮಯೆಗೆ ಆಗ ತೊಂದರೆಯಾಗಿದ್ದೆಂದರೆ ಅನಂತಕುಮಾರರಿಂದಲೇ. ತನಗೆ ಜವಾಬ್ದಾರಿ ಹುದ್ದೆಯನ್ನು ಕೊಟ್ಟ ಹೊರತು ಪರಿಷತ್ತಿನ ಕೆಲಸಕ್ಕೆ ಬರುವುದಿಲ್ಲವೆಂದು ಗೆಳೆಯನನ್ನು ಗೋಳುಹೊಯ್ದುಕೊಂಡ ಅನಂತಕುಮಾರ್ ಜಂಟಿಕಾರ್ಯದರ್ಶಿಯಾಗಿರಲು ಒಪ್ಪಿಕೊಂಡಿದ್ದಕ್ಕೆ ಅಚ್ಯುತ ಲಿಮಯೆ ಮತ್ತವರ ಗುಂಪಿಗೆ ಎಷ್ಟೋ ಸಮಾಧಾನ. ಈ ಗುಂಪಿನಲ್ಲಿ ಅನಂತಕುಮಾರನೇ ಕಿರಿಯ. ಆದರೆ, ಅಷ್ಟುಹೊತ್ತಿಗಾಗಲೇ ಅನಂತಕುಮಾರರ ಸಂಘಟನಾಕೌಶಲ, ವಾಕ್ಚಾತುರ್ಯ, ನಾಯಕತ್ವದ ಗುಣಲಕ್ಷಣಗಳು ಎಲ್ಲ ಗೆಳೆಯರ ಮನಸೆಳೆದಿದ್ದವು. ಹಾಗಾಗಿ ತಮ್ಮ ಗುಂಪಿನಿಂದಾಗಲಿ, ಪರಿಷತ್ತಿನಿಂದಾಗಲಿ ಅನಂತಕುಮಾರನನ್ನು ಕಳೆದುಕೊಳ್ಳಲು ಯಾರಿಗೂ ಇಷ್ಟವಿರಲಿಲ್ಲ. ಮುಂದೆ, ಅನಂತಕುಮಾರ ಉತ್ತಮ ಸಂಘಟನಕಾರನಾಗಿ ಬೆಳೆಯುವುದಕ್ಕೂ, ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳುವುದಕ್ಕೂ ಅಚ್ಯುತ ಲಿಮಯೆ ಮತ್ತವರ ಗೆಳೆಯರ ಗುಂಪು ನೀಡಿದ ಒತ್ತಾಸೆ ಅಪೂರ್ವವೇ ಸರಿ.

## ನಿಮ್ಮ ಪತ್ರಗಳು

ಜನವರಿ 21 ಸಂಚಿಕೆ ಎಂದಿನಂತೆ ಉತ್ತಮವಾಗಿ ಮೂಡಿಬಂದಿದೆ. ವಿಶೇಷ ಕಂಡು ಬಂದದ್ದು ಹಿರಿಯರಾದ TVV ಶಾಸ್ತ್ರಿಗಳ ಆತ್ಮೀಯ ಲೇಖನ. ಅನಂತ್ ಕುಮಾರ್ ರವರ ವಿಶಿಷ್ಟ ವ್ಯಕ್ತಿತ್ವದ ಮತ್ತೊಂದು ಆಯಾಮವನ್ನು ವಿಸ್ತಾರವಾಗಿ ಸೂಕ್ತ ಉದಾಹರಣೆ ಯೊಂದಿಗೆ ತಿಳಿಸಿದ್ದು ವ್ಯಕ್ತಿತ್ವಕ್ಕೆ ಮೆರುಗು ಕೊಟ್ಟಿದೆ.ತೇಜಸ್ ಬಗ್ಗೆ ಸುಧೀಂದ್ರ ಹಾಲ್ದೊಡ್ಡೇರಿ ಅವರ ಹಾಗೂ HAL ಅಭಿವೃದ್ಧಿ ಪಡಿಸಿದ ಸ್ವದೇಶಿ ಹೆಲಿಕಾಪ್ಟರ್ ಗಳ ಬಗ್ಗೆ ಎಂ. ವಿಜಯಕುಮಾರ್ ಅವರ ಲೇಖನಗಳು ಸಾಂದರ್ಭಿಕವಾಗಿದ್ದು ಉಕ್ಕಿನ ಹಕ್ಕಿಗಳ ಬಗ್ಗೆ ಸರಳವಾಗಿ ಮಾಹಿತಿಯನ್ನು ಎಲ್ಲರಿಗೂ ತಿಳಿಯುವಂತೆ ಬರೆದದ್ದು ಸಂತೋಷ ಆಯಿತು.

**ಶ್ರೀನಿವಾಸ ಕುಮಾರ್, ಬ್ಯಾಂಕ್ ಅಧಿಕಾರಿ, ಕಲ್ಕೆರೆ, ಬೆಂಗಳೂರು**

ಮಾನ್ಯರೆ, ನಮನಗಳು. ಪೆಬ್ರವರಿಯ ಅನಂತಪಥ ಪತ್ರಿಕೆಯಲ್ಲಿನ ಅನ್ನದಾನ ಕುರಿತ ಲೇಖನ ಗಮನಾರ್ಹವಾಗಿದೆ. ಅನಂತಕುಮಾರ್ ಬಾಲ್ಯದಲ್ಲಿನ ಕಾಯಿಲೆ, ಅದರ ಪರಿಹಾರ, ದೈವದ ರಕ್ಷಣೆಯು ಅವರ ಮೇಲೆ ಇದ್ದುದರ ಪ್ರತೀಕ. ಆ ತಾಯಿಯ ಹೃದಯಕ್ಕೆ ಆ ದಿನ ಅದೆಷ್ಟು ಸಮಾಧಾನವಾಗಿರಬಹುದು.. ಮದುವೆಯ ವಿವರಗಳು ಸಂತಸ ಕೊಟ್ಟಿತು. ಒಂದು ಮನವಿಯೇನೆಂದರೆ, ಲೇಖನದ ಮುಂದಿನ ಭಾಗ ಇಂತಹ ಪುಟದಲ್ಲಿದೆ ಎಂದು ತೋರಿಸುವ ಬಾಣದೊಳಗಿನ ಅಕ್ಷರಗಳ ಫಾಂಟ್ ತುಂಬಾ ಚಿಕ್ಕದು. ಓದಲು ಆಗುವುದಿಲ್ಲ...ದಯವಿಟ್ಟು ಸ್ವಲ್ಪ ದೊಡ್ಡದಾಗಿ ಹಾಕಿದರೆ ಚೆನ್ನ. ಪತ್ರಿಕೆಯ ಸಮಸ್ತ ಬಂಧುಗಳಿಗೂ ನಮನಗಳು.

**ಸುಬ್ಬಲಕ್ಷ್ಮಿ. ಹೆಚ್. ಕೆ. ಕೋಲಾರ.**

ಅನಂತಪಥ 8ನೇ ಸಂಚಿಕೆಯ ಬಿಡುಗಡೆಯ ಕಾರ್ಯಕ್ರಮ ಉತ್ತಮವಾಗಿ ಮೂಡಿಬಂತು. ಕೇಂದ್ರ ಮಂತ್ರಿಗಳಾದ ಶ್ರೀ ಡಿ.ವಿ. ಸದಾನಂದ ಗೌಡರು ಹಿಂದೆ ಶ್ರೀ ಅನಂತಕುಮಾರ್ ರವರು ನಿರ್ವಹಿಸಿದ್ದ ಖಾತೆಗಳಲ್ಲಿ ದಿಟ್ಟ ಹೆಜ್ಜೆಯಿಂದ ಜನಸಾಮಾನ್ಯರಿಗೆ, ವಿಶೇಷವಾಗಿ ಕೃಷಿ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಆದ ಅನುಕೂಲಗಳ ಬಗ್ಗೆ ಕೂಲಂಕುಷವಾಗಿ ವಿವರಿಸಿದರು. ಹಿಂದೆ ಶ್ರೀ ಅನಂತಕುಮಾರ್ ಅವರನ್ನು ನನ್ನ ಶ್ರೀಮತಿ ಜೊತೆಯಲ್ಲಿ ದೆಹಲಿಯ ಅವರ ಕಚೇರಿಯಲ್ಲಿ ಶ್ರೀ ನರಹರಿ ಫಡಕೆ ಮತ್ತು ಶ್ರೀಮತಿ ಮೀರ ಫಡಕೆಯವರೊಂದಿಗೆ ಬೇಟಿಯಾದ ನೆನಪು ಕಣ್ತುಂಬಿ ಬಂತ್ತು.

**ಹೆಚ್.ಎಸ್. ಮಂಜುನಾಥ ರಾವ್.**ಶಾರದಾ ಕಾಫಿ ವರ್ಕ್ಸ್, ಬೆಂಗಳೂರು

ಅನಂತಪಥ

Editor: **Gopal T.S** | Assistance: **K . Janardhana Thunga** | Layout: **Abhishek Gubbi Creatives**

Sketches: **Raghupathi Sringeri** | Inputs: **Poornaprajna | H. R. Prakash | Sreelakshmi Vishwanath**

Photographs: **Ananthkumar Prathisthana | Adamya Chethana | Achyuth Limaye**

Printed at: **Rashtrothana Mudranalaya, Chamrajpet, Bengaluru** | Published by: **Dr. Tejaswini Ananthkumar**

For – AnanthKumar Pratishthana # 12, Sumeru,M N Krishna Rao Road, Basavanagudi, Bangalore – 04

Ph: 080 26568484 | Email: ananth.path@akp.org.in

**ಸ್ಪಷ್ಟನೆ:** ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು; ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು. ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ.

To get a e-version of this periodical SMS your name and place to 8884182415

## ಅದಮ್ಯ ಸಂಭ್ರಮ

( ಅದಮ್ಯ ಚೇತನ ಸಂಸ್ಥೆಯ ಮಾರ್ಚ್ ತಿಂಗಳ ಚಟುವಟಿಕೆಗಳ ಸಮೀಕ್ಷೆ )

ಸಂಕಲನ: ಶ್ರೀಮತಿ ಶ್ರೀಲಕ್ಷ್ಮಿ ವಿಶ್ವನಾಥ್



ಪಾವಗಡ ಶ್ರೀ ರಾಮಕೃಷ್ಣ ಮಠದ ಶ್ರೀ ಜಪಾನಂದಜೀಯವರು ಅದಮ್ಯಚೇತನಕ್ಕೆ ಭೇಟಿನೀಡಿದ ಸಂದರ್ಭ



ಮಂತ್ರಾಲಯದ ಯತಿವರ್ಯರಾದ ಶ್ರೀ ಸುಬುಧೇಂದ್ರ ತೀರ್ಥರು ಅದಮ್ಯ ಚೇತನಕ್ಕೆ ಆಗಮಿಸಿ ಅಡುಗೆಮನೆಯ ಚಟುವಟಿಕೆಗಳನ್ನು ವೀಕ್ಷಿಸಿದ ಸಂದರ್ಭ



ಸ್ವಚ್ಛತಾ ಕಾರ್ಯಕ್ರಮದ ಜತೆಗೆ ಪರಿಸರಹಾನಿಯ ಬಗೆಗೆ ಜಾಗೃತಿಯುಂಟುಮಾಡುವ ಕಾರ್ಯಕ್ರಮ. ಪ್ಲಾಗಿಂಗ್ ಚಟುವಟಿಕೆಯಲ್ಲಿ ಈ ತಿಂಗಳ ವಿಷಯ Food wastage and its Carbon footprint




ಗೋರಖ್ ಪುರದ ದೀನ ದಯಾಳ ಉಪಾಧ್ಯಾಯ ವಿಶ್ವವಿದ್ಯಾನಿಲಯದಲ್ಲಿ ಅಂತಾರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಸಮಾರೋಪ ಭಾಷಣ ಮಾಡುತ್ತಿರುವ ಶ್ರೀಮತಿ ತೇಜಸ್ವಿನಿ ಅನಂತಕುಮಾರ್




ಪ್ರತಿ ವಾರವೂ ತಪ್ಪದೆ ಜರುಗುವ ಸಸ್ಯಾಗ್ರಹ ಆಂದೋಲನದ ಹಸಿರು ಭಾನುವಾರ ಕಾರ್ಯಕ್ರಮದಲ್ಲಿ ಕಾರ್ಯಕರ್ತರೊಡನೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್




ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಜನಪ್ರಿಯವಾಗುತ್ತಿರುವ ನಿತ್ಯ ಅನ್ನದಾನ ಕಾರ್ಯಕ್ರಮ

## ಅನಂತ ಚಿತ್ರಸಂಪುಟ

( ಮಾರ್ಚ್ ತಿಂಗಳ ನೆನಪಿನ ಹಲವು ಚಿತ್ರಗಳು )

ಸಂಕಲನ: ಶ್ರೀಮತಿ ತೇಜಸ್ವಿನಿ ಅನಂತಕುಮಾರ್



ಪಾರ್ಲಿಮೆಂಟ್ ಅಧಿವೇಶನದಲ್ಲಿ ಭಾಗವಹಿಸಲು ಆಗಮಿಸಿದ ಪ್ರಧಾನಿ ಶ್ರೀ ನರೇಂದ್ರ ಮೋದಿಯವರನ್ನು ಸಂಸದೀಯ ವ್ಯವಹಾರಗಳ ಸಚಿವ ಶ್ರೀ ಅನಂತಕುಮಾರ್ ಸ್ವಾಗತಿಸುತ್ತಿರುವುದು




ಶ್ರೀ ಅಮಿತ್ ಷಾ, ಶ್ರೀ ಯಡಿಯೂರಪ್ಪ ಹಾಗೂ ಶ್ರೀ ಅನಂತಕುಮಾರ್ ಮೈಸೂರಿನ ರಾಜ ಕುಟುಂಬದ ಯದುವೀರ ಒಡೆಯರ್ ಅವರ ಮಗುವನ್ನು ಹರಸುತ್ತಿರುವುದು



'ಇಂಧನ ಉಳಿಸಿ' ಆಂದೋಲನದ ಅಂಗವಾಗಿ ಸೈಕಲ್ ಸಂಡೇ ಕಾರ್ಯಕ್ರಮವನ್ನು ಜಾರಿಗೊಳಿಸಿದ ಶ್ರೀ ಅನಂತಕುಮಾರ್ ಉತ್ಸಾಹಿ ಗೆಳೆಯರೊಡನೆ



ಬೆಂಗಳೂರು ರಕ್ಷಿಸಿ" ಆಂದೋಲನದ ಅಂಗವಾಗಿ
೨೦೧೮ ಮಾರ್ಚ್ ೨ರಂದು ಪಾದಯಾತ್ರೆಯ ಮುಂಚೂಣಿಯಲ್ಲಿ ಶ್ರೀ ಅನಂತಕುಮಾರ್



೨೦೧೮ ಮಾರ್ಚ್ ೮ ರಂದು ಪರಿಸರ ಸ್ನೇಹಿ ಸುವಿಧಾ ಸ್ಯಾನಿಟರಿ ಪ್ಯಾಡ್ ಗಳನ್ನು ಮಾರಾಟಕ್ಕಾಗಿ ಬಿಡುಗಡೆಗೊಳಿಸುತ್ತಿರುವ ಶ್ರೀ ಅನಂತಕುಮಾರ್.



ತಮ್ಮ ಮಗಳು ಐಶ್ವರ್ಯಾ ಮದುವೆಯಸಮಾರಂಭದಲ್ಲಿ ಪಾಲ್ಗೊಂಡಿದ್ದ ಆಗಿನ ರಾಷ್ಟ್ರಪತಿ ಶ್ರೀ ಪ್ರಣಬ್ ಮುಖರ್ಜಿ, ಶ್ರೀ ಲಾಲು ಪ್ರಸಾದ್ ಯಾದವ್ ಮತ್ತಿತರ ಗಣ್ಯರನ್ನು ಅನಂತಕುಮಾರ್ ದಂಪತಿ ಸ್ವಾಗತಿಸುತ್ತಿರುವುದು